Digitized by Arya Samaj Foundation Chennai and eGangotri

ತುಳು ದೇವೀಮಹಾತ್ಮೆ

ಪ್ರಾಚೀನ ಗದ್ಯ ಕಾವ್ಯೊ

ಸಂಪಾದಕ
ವೆಂಕಟರಾಜ ಪುಣಿಂಚತ್ತಾಯ

ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರ
ಎಂ. ಜಿ. ಎಂ. ಕಾಲೇಜು, ಉಡುಪಿ

CC-0. In Public Domain. Gurukul Kangri Collection, Haridwar

Foundation

ತುಳು ದೇವೀಮಾಹಾತ್ಮೆ (ಪ್ರಾಚೀನ ಗದ್ಯಕಾವ್ಯ) — ಸಂ : ವೆಂಕಟರಾಜ ಪುಣಿಂಚತ್ತಾಯ

urukul Ka

Digitized by Arya Samaj Foundation Chennai and eGangotri

CC-0. In Public Domain. Gurukul Kangri Collection, Haridwar

Q.311
Digitized by Arya Samaj Foundation Chennai and eGangotri

..ATION

DONATION

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ತುಳು ದೇವೀಮಹಾತ್ಮೆ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ತುಳು ದೇವೀಮಹಾತ್ಮೆ

ಪ್ರಾಚೀನ ಗದ್ಯಕಾವ್ಯೊ

8311

DONATION

ಸಂಪಾದಕ

ವೆಂಕಟರಾಜ ಪುಣಿಂಚತ್ತಾಯ

"FORWARDED FREE OF COST, AND WITH THE COMPLEMENTS OF THE DEPARTMENT OF EDUCATION, GOVERNMENT OF INDIA, NEW DELHI"

ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರ : ಉಡುಪಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

TULU DEVIMAHATME (An Old Tulu Prose Work)—Edited with Introduction and Notes by Sri P. Venkataraja Puninchattaya. Published by Rashtrakavi Govind Pai Samshodhana Kendra, M.G M. College, Udupi 576 102 (D. K.). First Published 1991.

ಪ್ರಥಮ ಮುದ್ರಣ 1991

ಕಾಪಿರೈಟ್ © ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರ

ಮುದ್ರಕರು
ಶ್ರೀ ವಿಶಾರಾ ಪ್ರಿಂಟರ್ಸ್, ಶಿವರಾಂಪೇಟೆ, ಮೈಸೂರು 570 001

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪ್ರಕಾಶಕರ ಮಾತು

ಏಳು ವರ್ಷಗಳ ಹಿಂದೆ ಅಂದರೆ 1984ರಲ್ಲಿ 'ಶ್ರೀಭಾಗವತೊ' ಎಂಬ ಮಹಾಕಾವ್ಯ ಮಂಗಳೂರು ವಿಶ್ವವಿದ್ಯಾನಿಲಯದ ವತಿಯಿಂದ ಪ್ರಕಟವಾದಾಗ ತುಳುಭಾಷೆಗೂ ಪ್ರಾಚೀನ ಸಾಹಿತ್ಯ ಪರಂಪರೆಯಿರುವ ಭಾರತದ ಮುಖ್ಯ ಸಾಹಿತ್ಯಿಕ ಭಾಷೆಗಳ ಸಾಲಿನಲ್ಲಿ ಭದ್ರವಾದ ಸ್ಥಾನ ಸಿಕ್ಕಿದಂತಾಯಿತು. ಸುಮಾರು ಮುನ್ನೂರ ಐವತ್ತು ವರ್ಷಗಳ ಹಿಂದೆಯೇ ತುಳುವಿನಲ್ಲಿ ಇಂತಹ ಪ್ರೌಢ ಕಾವ್ಯದ ರಚನೆಯಾಗಿತ್ತು ಎಂಬುದನ್ನು ಗಮನಿಸುವಾಗ ದ್ರಾವಿಡ ಭಾಷಾಶಾಸ್ತ್ರದ ಪಿತಾಮಹನಾದ ಕಾಲ್ಡ್‌ವೆಲ್ ಮಹಾಶಯು ಹೇಳಿದ 'ತುಳು ದ್ರಾವಿಡ ಭಾಷೆಗಳ ಅತ್ಯಂತ ಪ್ರಬುದ್ಧವಾದ ಭಾಷೆಗಳಲ್ಲೊಂದು' ಎಂಬ ಮಾತಿನ ಅರ್ಥ ಜನಸಾಮಾನ್ಯರಿಗೂ ಆಗುವುದರಲ್ಲಿ ಸಂದೇಹವಿಲ್ಲ.

'ಶ್ರೀಭಾಗವತೊ'ದ ತಾಡವಾಲೆಯನ್ನು ಕಂಡುಹಿಡಿದು ಪ್ರಾಚೀನ ತುಳು ಲಿಪಿಯಲ್ಲಿದ್ದ ಈ ಕಾವ್ಯವನ್ನು ಆಧುನಿಕ ಕನ್ನಡ ಲಿಪಿಗೆ ಲಿಪ್ಯಂತರ ಮಾಡಿ ಪೀಠಿಕೆ, ಸಾರಾಂಶ, ಅರ್ಥವಿವರಣೆ, ಕಠಿಣ ಶಬ್ದಾರ್ಥ ಮುಂತಾದ ವಿವರಗಳನ್ನು ಒದಗಿಸಿ ತುಳುವ ಸಮಾಜಕ್ಕೆ ಅರ್ಪಿಸಿದ ಕಾಸರಗೋಡು ಪ್ರದೇಶದ ಖ್ಯಾತ ವಿದ್ವಾಂಸರಾದ ಶ್ರೀ ವೆಂಕಟರಾಜ ಪುಣಿಂಚತ್ತಾಯರು ತಮ್ಮ ಸಂಶೋಧನ ಕಾರ್ಯವನ್ನು ಮುಂದುವರಿಸಿ ಕಲ್ಲಿಕೋಟೆ ವಿಶ್ವವಿದ್ಯಾಲಯದ ಗ್ರಂಥಾಲಯದಲ್ಲಿನ 'ಕಾವೇರಿ' ಎಂಬ ಇನ್ನೊಂದು ಅಪೂರ್ಣ ಕಾವ್ಯಕೃತಿಯನ್ನು ಪತ್ತೆಹಚ್ಚಿ ಅದನ್ನು ಲಿಪ್ಯಂತರಗೊಳಿಸಿ ಕೊಟ್ಟರು. ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರಕ್ಕೆ 1987ರಲ್ಲಿ ಇದನ್ನು ಪ್ರಕಟಿಸುವ ಸುಯೋಗ ದೊರಕಿತು. ಈ ಎರಡೂ ಗ್ರಂಥಗಳಲ್ಲಿ ದೊರೆತ ಸಾವಿರಾರು ತುಳು ಶಬ್ದಗಳ ಪ್ರಾಚೀನ ರೂಪ ಹಾಗೂ ಪ್ರಯೋಗಗಳು ನಮ್ಮ ಕೇಂದ್ರದಲ್ಲಿ ಸಂಪನ್ನವಾಗುತ್ತಿರುವ ತುಳು ನಿಘಂಟಿನ ಶಬ್ದಸಂಪತ್ತಿಗೆ ಅಮೂಲ್ಯವಾದ ಕೊಡುಗೆಗಳನ್ನು ನೀಡಿವೆ ; ತುಳು ಭಾಷೆ ಪುರಾತನ ಕಾಲದಿಂದ ಬೆಳೆದುಕೊಂಡು ಬಂದ ದಾರಿಯನ್ನು ಗುರುತಿಸಲು ಮತ್ತು ವಿವಿಧ ಕಾಲಘಟ್ಟಗಳಲ್ಲಿ ಅದರ ಸ್ವರೂಪ ಹೇಗಿತ್ತೆಂದು ನಿರ್ಣಯಿಸಲು ಖಚಿತವಾದ ಮಾಹಿತಿಗಳನ್ನು ನೀಡಿವೆ.

ಇದೇ ಕಾಸರಗೋಡು ಪ್ರದೇಶದಲ್ಲಿ ರಚಿತವಾದದ್ದೆಂದು ನಂಬಲಾದ ಇನ್ನೊಂದು ಗ್ರಂಥವೇ 'ತುಳು ದೇವೀಮಹಾತ್ಮೆ'. ಗದ್ಯರೂಪದಲ್ಲಿ ರಚಿತವಾದ ಈ ತಾಡವಾಲೆ ಗ್ರಂಥವನ್ನು ಶ್ರೀ ಪುಣಿಂಚತ್ತಾಯರು ಕಲ್ಲಿಕೋಟೆಯ ಗ್ರಂಥಾಲಯದ ತಾಡವಾಲೆ ಕಟ್ಟುಗಳಿಂದ ಉತ್ಪನನ ಮಾಡಿದ್ದಾರೆ. ಕಾಲಗರ್ಭದಿಂದ ಮತ್ತೊಂದು ತುಳು ಪ್ರಾಚೀನ ಗ್ರಂಥವನ್ನು ಬೆಳಕಿಗೆ ತಂದಿದ್ದಾರೆ. ತುಳುಮಾತೆಯ ಕಿರೀಟಕ್ಕೆ ಮತ್ತೊಂದು ಗರಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸೇರಿದಂತಾಗಿದೆ. ಇದರ ಪ್ರಕಟಣೆಯ ಭಾಗ್ಯವನ್ನು ನಮ್ಮ ಸಂಸ್ಥೆಗೆ ವಹಿಸಿ ಕೊಟ್ಟದ್ದಕ್ಕಾಗಿ ಶ್ರೀ ಪುಣಿಂಚತ್ತಾಯರಿಗೂ, ತಾಡವಾಲೆಯನ್ನು ಒದಗಿಸಿಕೊಟ್ಟ ಕಲ್ಲಿಕೋಟೆ ವಿಶ್ವವಿದ್ಯಾನಿಲಯದ ಅಧಿಕಾರಿಗಳಿಗೂ, ವಿಶೇಷವಾಗಿ ಪ್ರೊ. ಯನ್. ವಿ. ಪಿ. ಉಣಿತ್ತಿರಿ ಅವರಿಗೂ ನಮ್ಮ ಕೃತಜ್ಞತೆಗಳು.

ತಾಡವಾಲೆ ಪ್ರತಿಯನ್ನು ಓದುವ, ಅರ್ಥಮಾಡಿಕೊಳ್ಳುವ, ಲಿಪ್ಯಂತರ ಮಾಡುವ, ಕಠಿಣ ಶಬ್ದಗಳಿಗೆ ಅರ್ಥಕೊಡುವ, ಪ್ರಾಚೀನ ತುಳು ರೂಪಗಳ ಅರ್ಥನಿರ್ಣಯ ಮಾಡುವ ಕೆಲಸ ಎಷ್ಟು ಕಷ್ಟಸಾಧ್ಯ ಎಂಬುದು ಆ ಕ್ಷೇತ್ರದಲ್ಲಿ ದುಡಿದ ವಿದ್ವಾಂಸರಿಗೆ ಮಾತ್ರ ತಿಳಿಯುತ್ತದೆ. ಇಂತಹ ಒಂದು ಪ್ರೌಢ ವಿದ್ವತ್ಕಾರ್ಯವನ್ನು ತಮ್ಮ ವಿದ್ವತ್ತು, ತಪಸ್ಸು, ಶ್ರದ್ಧೆ, ಕಠಿಣ ಪರಿಶ್ರಮದಿಂದ ಸಾಧಿಸಿಕೊಟ್ಟ ಶ್ರೀ ಪುಣಿಂಚತ್ತಾಯರಿಗೆ ತುಳು ಸಾರಸ್ವತ ಲೋಕ ಚಿರಋಣಿಯಾಗಬೇಕು.

ತುಳು ಭಾಷೆಯ ಶ್ರೀಮಂತಿಕೆಯನ್ನು ತೋರಿಸುವ ಇಂತಹ ಅದೆಷ್ಟು ಗ್ರಂಥಗಳು ಕಾಲಗರ್ಭದಲ್ಲಿ ಅಡಗಿವೆಯೋ ಏನೋ. ಅವುಗಳ ಅನ್ವೇಷಣೆ ಮಾಡಲು ತರುಣ ಪೀಳಿಗೆಯ ವಿದ್ವಾಂಸರಿಗೆ ಪುಣಿಂಚತ್ತಾಯರು ದಾರಿದೀಪಿಗೆಯಾಗಲಿ ಎಂದು ಹಾರೈಸೋಣ.

ಕು. ಶಿ. ಹರಿದಾಸ ಭಟ್ಟ

ಗೋವಿಂದ ಪೈ ಸಂಶೋಧನ ಕೇಂದ್ರ
ಉಡುಪಿ, ಅಕ್ಟೋಬರ್ ೬, ೧೯೯೧

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪರಿವಿಡಿ

ಪ್ರಸ್ತಾವನೆ/೯

ಕಥಾಸಾರಾಂಶ/೧೯

ತುಳು ದೇವೀಮಹಾತ್ಮೆ/೨೯

ಅರ್ಥಸೂಚಿ/೧೦೨

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಈ ಗ್ರಂಥವನ್ನು ಬರೆಯಲು ಬಳಸಿದ ಲಿಪಿ ಶೈಲಿ



CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪ್ರಸ್ತಾವನೆ

"ತುಳು ದೇವೀಮಹಾತ್ಮೆ"—ಈಗ ತುಳುವಿನಲ್ಲಿ ದೊರೆತಿರುವ ಪ್ರಪ್ರಥಮ ಗದ್ಯಕೃತಿ. ಹಳೆಯ ತುಳುವಿನ ಏನೇನೂ ಪರಿಚಯವಿಲ್ಲದಿರುವ ನಮಗೆ ಈ ಭಾಷೆ ಓದಲು ತೊಡಕೆನಿಸುವುದು ಸಹಜ. ಹಿಂದಿನ ಕಾಲದ ತುಳುವರು ಹೀಗೂ ಒಂದು ಭಾಷೆಯನ್ನು ಮಾತಾಡುತ್ತಿದ್ದಿರಬಹುದೆ-ಎಂದು ಸೋಜಿಗವಾಗಬಹುದು. ಈ ಉಪಭಾಷೆಯ ಸ್ವರೂಪವು ಶ್ರೀಭಾಗವತೊ-ಕಾವೇರಿ ಕಾವ್ಯಗಳ ಭಾಷೆಗಿಂತ ಅನೇಕಾಂಶಗಳಲ್ಲಿ ಭಿನ್ನವಾಗಿದೆ. ಪದಪ್ರಯೋಗ, ವಾಕ್ಯರಚನೆ (Structure), ಶೈಲಿ ಎಲ್ಲವೂ ಇಲ್ಲಿ ಅಪೂರ್ವವಾಗಿ ಕಾಣಿಸುತ್ತದೆ.

ಶ್ರೀಭಾಗವತೊ-ಕಾವೇರಿ ಕೃತಿಗಳು ಪದ್ಯರೂಪದಲ್ಲಿರುವುದರಿಂದ ಅಲ್ಲಿನ ಭಾಷೆ ಹೆಚ್ಚು 'ಕಾವ್ಯಾತ್ಮಕ'ವಾಗಿದ್ದರೆ, ಇಲ್ಲಿನ ಭಾಷೆ ಗದ್ಯರೂಪದಲ್ಲಿದ್ದು ಬಹುಮಟ್ಟಿಗೆ 'ವಿವರಣಾತ್ಮಕ'ವಾಗಿದೆ.

ಮಾರ್ಕಂಡೇಯ ಪುರಾಣಾಂತರ್ಗತವಾದ ದೇವೀಮಹಾತ್ಮೆಯ ಕಥೆಯನ್ನು ತುಳುಗದ್ಯದಲ್ಲಿ ಹೇಳುವುದು ಈ ಗ್ರಂಥಕಾರನ ಉದ್ದೇಶ. ವಚನಭಾರತ, ವಚನ ಭಾಗವತ ಮುಂತಾದ ಕನ್ನಡ ಕೃತಿಗಳ ಹಾಗೆ ಇದು 'ವಚನದೇವೀಮಹಾತ್ಮೆ' ಎಂದೂ ಹೆಸರಿಸಬಹುದಾದ ಒಂದು ಪ್ರಾಚೀನ ಕೃತಿ ಎನ್ನಬಹುದು.

ಇದು ಹಳೆಯ ತುಳು ಭಾಷೆಯಲ್ಲಿರುವುದರಿಂದ ಅತ್ಯಂತ ಮೌಲಿಕವಾಗಿದೆ; ಆಧುನಿಕ ತುಳುವಿನಲ್ಲಿಲ್ಲದ, ಶ್ರೀಭಾಗವತೊ-ಕಾವೇರಿಗಳಲ್ಲೂ ಇಲ್ಲದ, ಕೆಲವು ಅಪೂರ್ವ ತುಳು ಪದಗಳು ಇಲ್ಲಿ ಕಾಣಸಿಗುತ್ತವೆ.

ಒಟ್ತಿಳ್ಳ-ಇತರ, ಮುಚ್ಚೊ-ಜಾಗ್ರತೆ, ಅಂಬುಡಿಕೆ-ಬತ್ತಳಿಕೆ, ತೆರ್ವತ್ತ್ಯ-ಬಿಲ್ಲಿನ ಹಗ್ಗ, ಜ್ಯಾತಿ-ಹಾಗೆ, ಶುಟ್ಯ-ಸುಳಿ, ಕಂದಿಕೆ-ಕಾಲಂದುಗೆ, ಬೆಟ್ಪ-ಬೆಳಕು, ಮುಂತಾದ ಪದಗಳೂ ಉಬೆಪು-ಸೀಳು, ನೀರ್ಪು-ಪಾಸಿಸು, ಒಡ್ಪು-ನಿಯಂತ್ರಿಸು, ಗಂತ್‌ಪಾರ್-ಜಿಗಿಯು, ಬಟ್-ಬರು, ಮಂತಿಪು-ಆಲೋಚಿಸು ಮುಂತಾದ ಧಾತುಗಳೂ ಇಲ್ಲಿ ಕಾಣಸಿಗುತ್ತವೆ.

ಲಿಪಿಜ್ಞಾನವುಳ್ಳ ನಮ್ಮ ಪೂರ್ವಜರಾದ ತುಳುವರು ತಮ್ಮ ಅನಿಸಿಕೆಗಳನ್ನು ತಾವು ಮಾತಾಡುತ್ತಿದ್ದ ಭಾಷೆಯಲ್ಲಿ ಗದ್ಯಪದ್ಯಗಳ ರೂಪದಲ್ಲಿ ಉಲ್ಲೇಖಿಸುತ್ತಿದ್ದರೆಂಬುದಕ್ಕೆ ಈಗ ಸಾಕಷ್ಟು ಆಧಾರಗಳು ದೊರಕಿದಂತಾಗಿದೆ. ಈ ಲಿಖಿತ ಸಾಹಿತ್ಯ ದೊರಕಿದುದರಿಂದ ನಮ್ಮ ಹಿರಿಯರು ಮಾತಾಡುತ್ತಿದ್ದ ತುಳುವನ್ನು (ಆ ಕವಿಯ ಪ್ರದೇಶದ ಉಪಭಾಷೆ ಆಡುಭಾಷೆಯನ್ನು) ಅರಿತುಕೊಳ್ಳಲು ನಮಗೆ ಸಾಕಷ್ಟು ಮಾರ್ಗ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ದರ್ಶನ ಲಭಿಸಿದಂತಾಗಿದೆ. ಕಾವ್ಯದೃಷ್ಟಿಯಿಂದ ಮಾತ್ರವಲ್ಲದೆ, ಭಾಷಾವಿಜ್ಞಾನದ ದೃಷ್ಟಿಯಿಂದಲೂ ಈ ಗ್ರಂಥವು ಖಂಡಿತಾ ಅಧ್ಯಯನಯೋಗ್ಯವಾಗಿದೆ.

ಗ್ರಂಥಕಾರನ ಪರಿಚಯ

ಈ ಗ್ರಂಥವನ್ನು ರಚಿಸಿದ ವಿದ್ವಾಂಸನು ಪುರಾತನ ಕುಂಬ್ಳೆಸೀಮೆ (ಈಗಿನ ಕಾಸರಗೋಡು ಜಿಲ್ಲೆ)ಯ ಮುಟ್ಟತ್ತೋಡಿ ಗ್ರಾಮದ ಪರಿಸರದಲ್ಲಿ ವಾಸವಾಗಿದ್ದವನೆಂದು ತಿಳಿಯಲಾಗಿದೆ. ತೆಂಕಿಲ್ಲಾಯ ಎಂಬ ಕುಲನಾಮವುಳ್ಳ ಈತನ ನಿಜವಾದ ಹೆಸರು ತಿಳಿದುಬಂದಿಲ್ಲ. ತೆಂಕಿಲ್ಲಾಯ ವಂಶಜರು ಸುಮಾರು ಐನೂರು ವರ್ಷಗಳ ಹಿಂದೆಯೇ ಬಾರಿಕ್ಕಾಡಿನಿಂದ ವಲಸೆಹೋಗಿ ಪುಲ್ಲೂರು ಎಂಬಲ್ಲಿ ನೆಲಸಿದರೆಂದು ಹೇಳಲಾಗುತ್ತಿದೆ.

ಈ ತಾಡವಾಲೆ ದೊರೆತದ್ದು ಪುಲ್ಲೂರಿನ (ಹರಿಪುರದ) ತೆಂಕಿಲ್ಲಾಯರ ಮನೆಯಲ್ಲಿ. ತೆಂಕಿಲ್ಲಾಯ ವಂಶಜರು ಬಾರಿಕ್ಕಾಡಿನಲ್ಲಿ ನೆಲಸಿದ್ದ ಕಾಲದಲ್ಲಿ (ಸುಮಾರು ಐನೂರು ವರ್ಷಗಳ ಹಿಂದೆ) ಈ ಗ್ರಂಥದ ರಚನೆಯಾಗಿರಬೇಕು. ಆ ಕಾಲದಲ್ಲಿ ಬಾರಿಕ್ಕಾಡು-ಪಾಡಿಗ್ರಾಮಗಳ ತುಳುಬ್ರಾಹ್ಮಣರಿಗೂ ಮಾಯಿಪ್ಪಾಡಿ ಅರಮನೆಗೂ ನಿಕಟವಾದ ಸಂಪರ್ಕವಿದ್ದಂತೆ ತಿಳಿದು ಬರುತ್ತದೆ. 'ತೌಳವಾಧೀಶ'ರೆಂದೇ ಬಿರುದು ಧರಿಸಿದ ಕುಂಬಳೆ ಅರಸರು ತುಳು ಕವಿಗಳಿಗೆ, ತುಳು ಬರಹಗಾರರಿಗೆ ಪ್ರೋತ್ಸಾಹ ನೀಡಿರಬಹುದು. ಈ ಸೀಮೆಯ ಭೂತಾರಾಧನೆಯಂಥ ಜನಪದ ಸಂಪ್ರದಾಯಗಳಿಗೆ, ಹಾಗೆಯೇ ಸೀಮೆಯೊಳಗಿನ ಬೆದ್ರಡ್ಕ, ಪುತ್ತಿಗೆ ಮುಂತಾದ ಕಡೆಗಳಲ್ಲಿರುವ ಸುಂದರ ದಾರುಶಿಲ್ಪಗಳಿಗೆ, ಪುಳ್ಕೂರು ಬಾಚಸಂತಹ ಶಿಲ್ಪಿಗಳಿಗೆ, ಯಕ್ಷಗಾನ ಮುಂತಾದ ಕಲಾರೂಪಗಳಿಗೆ, ಸಂಸ್ಕೃತಕನ್ನಡ ಕವಿಗಳಿಗೆ (ಉದಾ : ತಳಂಗೆರೆಯ ಶಾಸನದ ಸಂಸ್ಕೃತ ಕನ್ನಡ ವೃತ್ತಗಳನ್ನು ಗಮನಿಸಿರಿ)-ಹೀಗೆ ತಮ್ಮ ಸೀಮೆಯ ಬಹುಮುಖ ಪ್ರತಿಭೆಗಳಿಗೆ ಪ್ರೋತ್ಸಾಹ ಸಹಕಾರಗಳನ್ನು ನೀಡುತ್ತಾ ಬಂದ ಕಾರಣದಿಂದಲೇ, ಕುಂಬಳೆ ಅರಸೊತ್ತಿಗೆ ಇಲ್ಲಿ ಜನಪ್ರಿಯತೆಯನ್ನು ಗಳಿಸಿರಬೇಕು. ಅರಸೊತ್ತಿಗೆಯ ಪ್ರಭಾವ ಸಂಪರ್ಕಗಳು ಕಡಮೆಯಾಗುತ್ತಾ ಬಂದಂತೆ, ಹಳೆಯ ಸಾಹಿತ್ಯ ವೈಭವ ಮತ್ತು ಕಲಾವೈಭವಗಳೂ ಕಣ್ಮರೆಯಾಗುತ್ತಾ ಬಂದುವು. ಏನಿದ್ದರೂ, ಈಗ ದೊರೆತಿರುವ ತುಳು ಭಾಷೆಯ ಮೂರು ಪ್ರಾಚೀನ ಸಾಹಿತ್ಯ ಗ್ರಂಥಗಳೂ ಕುಂಬಳೆ ಸೀಮೆಯ ಪ್ರದೇಶದೊಳಗೇ ಲಭಿಸಿರುವುದು ಈ ಮೇಲಿನ ಅಭಿಪ್ರಾಯಕ್ಕೆ ಸೂಕ್ತ ದೃಕ್ಸಾಕ್ಷಿಯಾಗಿದೆ.

ಲಿಪಿಯ ಬಳಕೆ

ತುಳುಲಿಪಿ, ತಿಗಳಾರಲಿಪಿ, ತುಳುಮಲೆಯಾಳಂ ಲಿಪಿ-ಮುಂತಾದ ಹೆಸರುಗಳಿಂದ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕಾಸರಗೋಡು, ದಕ್ಷಿಣಕನ್ನಡ, ಉತ್ತರಕನ್ನಡ ಮುಂತಾದ ಜಿಲ್ಲೆಗಳಲ್ಲಿ ಪ್ರಸಿದ್ಧವಾಗಿರುವ ಲಿಪಿಶೈಲಿಯೊಂದರಲ್ಲಿ* ಈ ಗ್ರಂಥವನ್ನು ಬರೆಯಲಾಗಿದೆ. 'ಶ್ರೀಭಾಗವತೊ-ಕಾವೇರಿ'ಗಳನ್ನು ಬರೆಯಲಾದ ಲಿಪಿಶೈಲಿಗೂ, ಈ ಗ್ರಂಥದ ಲಿಪಿಶೈಲಿಗೂ ಬಹು ಮಟ್ಟಿಗೆ ಸಾಮ್ಯತೆಯಿದೆ. ಆದರೆ 'ಸ್ಟ' ಎಂಬ ಅಪೂರ್ವಧ್ವನಿಮಾದ ಉಲ್ಲೇಖ ಭಿನ್ನರೀತಿಯಲ್ಲಿದ್ದು, ಉಚ್ಚಾರಣೆಯ ತೊಡಕಿಗೆ ಕಾರಣವಾಗಿದೆ. ಇಲ್ಲಿ ಅದರ ರಚನೆಯನ್ನು ಸೂಕ್ಷ್ಮವಾಗಿ ಪರಿಶೀಲಿಸಿದರೆ, ಅದು 'ಸ್ದ' ಎಂದು ಓದಬಹುದಾದ ರೀತಿಯಲ್ಲಿ ಕಂಡುಬರುತ್ತದೆ. ಇಲ್ಲಿನ ಸಕಾರಕ್ಕೆ Silent Pronunciationನ್ನು ಒಪ್ಪಿಕೊಳ್ಳದೆ, ಇದನ್ನು ಸಲೀಸಾಗಿ ಓದುವುದಕ್ಕೆ ಕಷ್ಟವೆಂಬ ರೀತಿಯಲ್ಲಿದೆ ಅದರ ಬಳಕೆ. ಅಂತೂ ಪ್ರಾಚೀನ ತುಳುವಿನಲ್ಲಿದ್ದ ಯಾವುದೋ ಒಂದು ಅಪ್ಪಟ ದ್ರಾವಿಡೀಯ ಧ್ವನಿಮಾಕ್ಕೆ ಸರಿಯಾದ ಲಿಪಿಸಂಕೇತವನ್ನು ಕೊಡಲಾಗದೆ ತುಳುಭಾಷೆಯ ಲಿಪಿಕಾರರು ಎಡತಪಡಿಸಿರಬಹುದೇ–ಎಂಬ ಸಂಶಯ ನಮಗೆ ಮೂಡದಿರುವುದಿಲ್ಲ. ಆದರೆ ಆ ಕಾಲದ ಸರಿಯಾದ ಉಚ್ಚಾರಗಳನ್ನು ಬಲ್ಲ ಅಂದಿನ ಲಿಪಿಕಾರರಿಗೆ ಇದು ಸಮಸ್ಯೆಯಾಗಿ ಕಂಡಿರಲಾರದು ಎಂಬುದೂ ಸತ್ಯವೆ.

---

* ಕ್ರಿಸ್ತಶಕ ಸುಮಾರು 1190ರಿಂದ 1600ರ ವರೆಗೆ ತುಳು ಮಲೆಯಾಳಗಳಿಗೆ ಒಂದೇ ಲಿಪಿ ರೂಢಿಯಲ್ಲಿತ್ತು. ಇದಕ್ಕೆ ಆ ಕಾಲದಲ್ಲಿ 'ಮಲಬಾರ್ ಆರ್ಯಎಳುತ್ತು' ಎಂದು ಹೆಸರಿತ್ತು.



CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸ್ಡ್ಕಾರವುಳ್ಳ ಪದಗಳು

ತುಳುಭಾಗವತೊದಲ್ಲಿ 'ಸ್ಟ್'ಕಾರದಿಂದ ಆರಂಭವಾಗುವ ಪದಗಳು ನಮಗೆದೊರಕಿದ್ದು ಒಟ್ಟು ನಾಲ್ಕು ಮಾತ್ರ-ಸ್ಟ್‌ಬೆರ್, ಸ್ಟೀಕುಳು, ಸ್ಟ್‌ಪ್ಪೊಡು, ಸ್ಟ್‌ಪ್ಪುನಾನಿ.

ಕಾವೇರಿಯಲ್ಲಿ ಅಂಥದು ಸುಮಾರು ಹನ್ನೊಂದು ಪದಗಳು ಲಭಿಸಿವೆ—ಸ್ಟ್, ಸ್ಟೆಂದ್, ಸ್ಟೆಂದ, ಸ್ಟೆಗ್, ಸ್ಟಣೆಯಿ, ಸ್ಟಿತೆನ, ಸ್ಟಾದ್, ಸ್ಟೇ, ಸ್ಟೌತ್ರ್.

ಪದಾಂತ್ಯದಲ್ಲಿ ಸ್ಟ್‌ಕಾರ ಬಂದ ಉದಾಹರಣೆಗಳು ಈಯೆರಡು ಗ್ರಂಥಗಳಲ್ಲೂ ಸಾಕಷ್ಟು ದೊರೆಯುತ್ತವೆ. ಅತಿಪ್ರಾಚೀನ ತುಳುವಿನಲ್ಲಿದ್ದ ಈ ಧ್ವನಿಮಾವು ತುಂಗನ ಕಾಲಕ್ಕೆ ಸ್ವಲ್ಪ ಸ್ವಲ್ಪ ವಿರಳವಾಗತೊಡಗಿ ಕ್ರಮೇಣ ಬಿದ್ದುಹೋದಂತೆ ಭಾಸವಾಗುತ್ತದೆ.* ಮಾತ್ರವಲ್ಲ, ಮೂಲದಲ್ಲಿ (ಈಗ ತಮಿಳು ಮಲೆಯಾಳಗಳ ವತ್ಸ್ಯ ವರ್ಣಗಳ ಹಾಗೆ) ಅದು ಒತ್ತಕ್ಷರವೇ ಆಗಿದ್ದು ತುಂಗನ ಕಾಲಕ್ಕೆ ಅದು ಶಿಥಿಲದ್ವಿತ್ವವಾಗತೊಡಗಿದುದಾದರೆ, ಅದರ ಉಚ್ಚಾರಣಪ್ರಿಯಂತೆ ಕಡಿಮೆಯಾಗತೊಡಗಿದುದಕ್ಕೂ ಅದೇ ಸಾಕ್ಷಿಯೆನ್ನಬಹುದು. ಈ ದೃಷ್ಟಿಯಿಂದ ವಿವೇಚನೆ ಮಾಡಿದಾಗ 'ತುಳು ದೇವೀಮಹಾತ್ಮೆ' ಗ್ರಂಥದ ಕಾಲ ಇನ್ನಷ್ಟು ಪ್ರಾಚೀನವಾದುದೆಂದು ತಿಳಿಯಬೇಕಾಗುತ್ತದೆ. ಇದರ ಪ್ರಾಚೀನತೆಗೆ ಬೇರೆಯೂ ಕೆಲವು ಕಾರಣಗಳನ್ನು ಕೊಡಬಹುದು.

(i) "ಶ್ರೀಭಾಗವತೊ-ಕಾವೇರಿ" ಕಾವ್ಯಗಳ ಪ್ರಭಾವ ಈ ಗ್ರಂಥದಲ್ಲಿ ಕಾಣಿಸುವುದಿಲ್ಲ.

(ii) ಈ ಗ್ರಂಥಕಾರನ ಕಾಲಕ್ಕೆ ತುಳುವಿನಲ್ಲಿ ಶಿಷ್ಟಕಾವ್ಯಗಳ ರಚನೆ ಆರಂಭವಾದಂತೆ ಅನಿಸುವುದಿಲ್ಲ.

(iii) "ಶ್ರೀಭಾಗವತೊ-ಕಾವೇರಿ"ಗಳಲ್ಲಿರುವಷ್ಟು ಪರಿಷ್ಕೃತ ಭಾಷೆ ಇದಲ್ಲ.

(iv) "ಶ್ರೀಭಾಗವತೊ-ಕಾವೇರಿ"ಗಳಲ್ಲಿ ರಳದ ಬಳಕೆಯನ್ನು ಕಳಕೊಂಡಿರುವ ಪದಗಳು ಇಲ್ಲಿ ರಳಯುಕ್ತವಾಗಿ ಪ್ರಯೋಗಗೊಂಡಿವೆ. ಉದಾ : ಏಪಟ್ಟಿಲಾ, ಅಪ್ಪುಟ್, ಒಟ್ಟ್ರ್—ಇತ್ಯಾದಿ.

(v) ಸ್ಡ್ಕಾರದ ಬಳಕೆ ಹೆಚ್ಚು ವ್ಯಾಪಕವಾಗಿದೆ. ಒಂದೇ ಪದದಲ್ಲಿ ಎರಡೆರಡು ಸ್ಡ್ಕಾರಗಳಿದ್ದ ಉದಾಹರಣೆಗಳೂ ಇಲ್ಲಿವೆ. ಉದಾ : ಆಸ್ಡ್ನಸ್ಡ್, ಸ್ಡೆಂಡಾಸ್ಡ್, ಸ್ಡೆಂಡಾತ್ನಸ್ಡ್, ಸ್ಡೆಂಡಾಸ್ಡೆತ್ತ್, ಸ್ಡೆಂಡಾಸ್ಡ್‌ನ್-ಇತ್ಯಾದಿ.

ವಿಷ್ಣುತುಂಗನ ಮಾತೃಭಾಷೆ ಕನ್ನಡ. ಅವನು ಮೂಲಗ್ರಂಥವಾಗಿ ಎತ್ತಿಕೊಂಡ ವಿಷ್ಣುಭಾಗವತದ ಭಾಷೆಯೂ ಕನ್ನಡ. ಇವೆರಡರ ಪ್ರಭಾವವೂ ಅವನ ಕಾವ್ಯದಲ್ಲಿ

---

* ತುಂಗನ ಕಾಲದಲ್ಲೇ ಸ್ಟ್‌ಕಾರದ ಬಳಕೆಗೆ ಒಂದು ಸಾರ್ವತ್ರಿಕ ಹಾಗೂ ಸಮಾನ ನಿಯಮವಿದ್ದಂತೆ ಕಾಣಿಸುವುದಿಲ್ಲ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಬಿದ್ದಿರಬಹುದು. ಆದರೆ ತೇಕತ್ತಿಲ್ಲಾಯ ಕವಿಯ ಮಾತೃಭಾಷೆ ತುಳು. ಅವನಿಗೆ ಸಂಸ್ಕೃತ ದೇವೀಮಹಾತ್ಮೆಯೊಡನೆಯೇ ನೇರ ಸಂಬಂಧ. ಅವನ ಶಿಷ್ಟ ಭಾಷೆಯೆಂದರೆ ಅವನ ಕಾಲದಲ್ಲಿ ಮಾತಾಡುತ್ತಿದ್ದ ತುಳು ಆಡುಭಾಷೆ (colloquial)ಗೆ ಕೆಲವು ಸಂಸ್ಕೃತ ಪದಗಳ ಮಿಶ್ರಣ—ಅಷ್ಟೆ. ಸಂಸ್ಕೃತ ಪದಗಳನ್ನು ಸೇರಿಸಿ ಮಾತಾಡುವುದು ಬಹುಶಃ ಆ ಕಾಲದ ಭಾಷೆಯ ಗೌರವವಾಗಿರಬೇಕು. ವಿಷ್ಣುತುಂಗನ ಹಾಗೆ ತೇಕತ್ತಿಲ್ಲಾಯ ಕವಿಯೂ ಸಂಸ್ಕೃತ ಪದಗಳಿಗೆ ತುಳು ಪ್ರತ್ಯಯಗಳನ್ನು ಹಚ್ಚಿ ಹೊಸ ಕ್ರಿಯಾಪದಗಳನ್ನು ಬಳಕೆಗೆ ತಂದಿದ್ದಾನೆ.

ಉದಾ : ಅನುಗ್ರಹಿಪ್ಪು, ಅನುಭಯಿಪ್ಪು, ಅನುವರ್ಣಿಪ್ಪು (-ವಿವರಿಸು) ಅಪಹರಿಪ್ಪು, ಆಚರಿಪ್ಪು, ಆಜ್ಞಾಪಿಪ್ಪು, ಆಲೋಚಿಪ್ಪು, ಆಶ್ರೈಪ್ಪು, ಆಕ್ಷೇಪಿಪ್ಪು (ಎಸೆಯು), ಇಚ್ಛಿಪ್ಪು (ಯಿಚ್ಛಿಪ್ಪು), ಈಕ್ಷಿಪ್ಪು, ಕುತೂಹಲಿಪ್ಪು, ಕೋಪಿಪ್ಪು, ಕ್ಲೇಶಿಪ್ಪು, ಕೋಭಿಪ್ಪು, ಖಂಡಿಪ್ಪು, ಗರ್ಜಿಪ್ಪು, ಗೃಹೀಪ್ಪು, ಚೂರ್ಣಿಪ್ಪು, ಜನಿಪ್ಪೊ, ಜ್ವಲಿಪ್ಪು, ದುಃಖಿಪ್ಪು, (ದುಃಖೀಪ್ಪು), ಧರಿಪ್ಪು, ನಮಸ್ಕರಿಪ್ಪು, ನಿರಾಕರಿಪ್ಪೋವ್ವೊಣ್, ಪರಿಹರಿಪ್ಪು, ಪೂಜಿಪ್ಪು, ಪ್ರಯೋಗಿಪ್ಪು, ಪ್ರವರ್ತಿಪ್ಪು, ಪ್ರವಾಹಿಪ್ಪು, ಪ್ರಾಪಿಪ್ಪು, ಬಹುಮಾನಿಪ್ಪೊವೆಣ್, ಭವಿಪ್ಪು, ಬಾಧಿಪ್ಪು, ಭುಂಜಿಪ್ಪು, ಭೋಗೀಪ್ಪು, ಭ್ರಮಿಪ್ಪು, ಮರ್ದಿಪ್ಪು, ಮೋಹಿಪ್ಪು, ಯಾತ್ರಿಪ್ಪು, ರಕ್ಷಿಪ್ಪು, ಲಾಭಿಪ್ಪು, ವಧಿಪ್ಪು, ವರ್ತಿಪ್ಪು, ವರ್ಜಿಪ್ಪು, ವಿಚಾರಿಪ್ಪು, ವಿಭಾಗಿಪ್ಪು, ವಿಶ್ರಮಿಪ್ಪು, ಸಂಚರಿಪ್ಪು, ಸಂತೋಷಿಪ್ಪು, ಸಂಧಿಪ್ಪು, ಸಂಹರಿಪ್ಪು, ಸಾಧಿಪ್ಪು, ಸಿದ್ಧಿಪ್ಪು, ಸ್ಮರಿಪ್ಪು. ಸ್ತುತಿಪ್ಪು, ಸ್ನೇಹೀಪ್ಪು, ಶೋಭೀಪ್ಪು.

ರಳಾಕ್ಷರದ ಅಸ್ತಿತ್ವ

ಈ ಗ್ರಂಥವನ್ನು ಆಮೂಲಾಗ್ರವಾಗಿ ಪರಿಶೀಲಿಸಿದಾಗ, ಶ್ರೀಭಾಗವತೊ-ಕಾವೇರಿಗಳಲ್ಲಿ ಬಳಕೆಯಾಗಿರುವ ಸಂದರ್ಭಗಳಲ್ಲದೆ, ಬೇರೆಯೂ ಕೆಲವು ಸಂದರ್ಭಗಳಲ್ಲಿ ರಳಾಕ್ಷರದ ಬಳಕೆಯು ಪ್ರಾಚೀನ ತುಳುವಿನಲ್ಲಿ ಇತ್ತೆಂದು ತಿಳಿದು ಬರುತ್ತದೆ. ಉದಾ :

ಒೞ್ತ್ರಿ (ಒಬ್ಬಳು) ಔೞ್ತ (ಅಲ್ಲಿಂದ)
ಬೆೞ್ಪು (ಬೆಳಕು) ತೊೞ್ಪು (ತುಳಿಯು)
ಶುೞ್ಮೆ (ಸುಳಿ) ಬೞ್ (ಬರು)
ಒೞ್ತ್ಳ್ಪ (ಇತರ) ಸ್ದೞಿಪಪ್ಪಡ್ತ್ತೀ (ಸೆಳೆಯಲ್ಪಟ್ಟ)
ಅವುೞ್ (ಅಲ್ಲಿ) ಬೋೞ್ತುನ್ (ಬೇಕಾಗಿದೆ)
ಒೞ್ಪ (ಎಲ್ಲಿ) —ಇತ್ಯಾದಿ

ಆದರೆ ಒೞ್ತ್ರಿ, ಅವುೞ್ ಮುಂತಾದ ಪದಗಳು ರಳರಹಿತವಾಗಿಯೂ ಕೆಲವೆಡೆ ಪ್ರಯೋಗವಾಗಿರುವುದರಿಂದ ಈ ಗ್ರಂಥದ ಪ್ರತಿಕಾರನ ಕಾಲಕ್ಕೆ ರಳಾಕ್ಷರದ ಬಳಕೆ ವಿರಳವಾಗುತ್ತಾ ಬಂದಿರಬೇಕೆಂದು ನಾವು ಊಹಿಸಬಹುದು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಹಸ್ತಪ್ರತಿಯ ಸ್ವರೂಪ

ಹಸ್ತಪ್ರತಿಯನ್ನು ಸಮಗ್ರವಾಗಿ ಪರಿಶೀಲಿಸಿದಾಗ ಇದು ಕೃತಿಕಾರನ ಮೂಲ ಪ್ರತಿಯಾಗಿರುವಂತೆ ನಮಗೆ ಭಾಸವಾಗುವುದಿಲ್ಲ. ಕೃತಿಕಾರನ ಕಾಲದ ಭಾಷೆಗೂ ಲಿಪಿಕಾರನ ಕಾಲದ ಭಾಷೆಗೂ ಅಲ್ಪಸ್ವಲ್ಪ ವ್ಯತ್ಯಾಸವಿದ್ದಿರಬಹುದಾದ್ದರಿಂದ, ಹಸ್ತ ಪ್ರತಿಯ ಬರವಣಿಗೆಯ ವೇಳೆ, ಲಿಪಿಕಾರನ ಭಾಷೆಯ ಪ್ರಭಾವ ಈ ಗ್ರಂಥದಲ್ಲಿ ಆಗಿರುವಂತೆ ಕಂಡುಬರುತ್ತದೆ. ಗ್ರಂಥದುದ್ದಕ್ಕೂ ಅನೇಕ ಪದಗಳ ಎರಡೋ ಮೂರೋ ರೂಪಗಳು ಕಾಣಸಿಗುವುದೇ ಅದಕ್ಕೆ ಸಾಕ್ಷಿ.

ಕೊಟ್ / ಕೊಳ್ (ಕೊಡು) — ಶಿಗ್‌ಟ್ತ್ / ಶಿಗ್‌ಟ್ತ್ (ಸೀಳಿ)
ಸ್ದಡತ / ಇಡೆತ (ಎಡಭಾಗದ) — ಶೆಟ್ಟೊ / ಚೆಟ್ಟೊ (ನಾಶಮಾಡು)
ಒಟ್ರ್ಶಿ / ಒರ್ತ್ಯೆ (ಒಬ್ಬಳೇ) — ಒಟ್ತ್ಳ್ / ಒರ್ತಳ್ಳ್ (ಇತರ)
ಖಟ್ಗೊ / ಖಟ್ಗೊ (ಖಡ್ಗ) — ವೇಗಿತ್‌ತ್ತ್ / ಬೇಗಿತ್‌ತ್ತ್ (ಬೇಗನೆ)
ಮಗ್‌ಟಲ / ಮಗ್‌ಳಲ (ಮಂತ್ರ) — ಅವುಟ್ತ್ / ಅವುಳ್ತ್ (ಅಲ್ಲಿಂದ)
ಬೂಟ್ರತೆ / ಬೂರ್ತತೆ (ಬೀಳಿಸಿದನು)
ಗೃಹೊಟ್‌ಪ್ಪರ್ / ಗೃಹೊಟ್‌ಪ್ಪ / ಗೃಹೊಂಟ್ (ಗೃಹದಲ್ಲಿ)
ಜ್ಯಾಒಟ್ರ್ಶಿ / ಜಾಸ್ದೊರ್ಶಿ / ಜಾವೊರ್ಶಿ (ಯಾವಳೊಬ್ಬಳು)

ಅಸ್ದ್–ಎಂಬ ಪದದ ವಿಶ್ಲೇಷಣೆ

ಅದು—ಆ ಎಂಬರ್ಥಗಳಲ್ಲಿ 'ಅಸ್ದ್' ಎಂಬ ಪದವು ದೇವೀಮಹಾತ್ಮೆಯಲ್ಲಿ ಧಾರಾಳವಾಗಿ ಪ್ರಯೋಗಗೊಂಡಿದೆ. ಶ್ರೀಭಾಗವತೊ–ಕಾವೇರಿಗಳಲ್ಲಿ ಈ ಪದವು 'ಅಸ್ಟ್' ಎಂಬ ರೂಪದಲ್ಲಿ ಕಾಣಸಿಕೊಂಡಿದೆ. ಇದು ಹಳೆಗನ್ನಡ 'ಅತ್ತು' ಎಂಬ ಪದಕ್ಕೆ ಸಂವಾದಿಯಾದುದು. ಕಿಟ್ಟೆಲ್‌ಕೋಶದಲ್ಲಿ 'ಅತ್ತು' ಪದದ ಬಗ್ಗೆ ಹೀಗೆ ವಿವರಿಸಲಾಗಿದೆ—

—ಅತ್ತು Attu. 1.=ಅತು etc ನಿನತ್ತು, ಎನತ್ತು, ತನತ್ತು, ನಿಮಂತ್ತು, ಎಮತ್ತು, ತಮಂತ್ತು ; ಮಂನಿಸು ಇದು ನಿನತ್ತು, ಸಯ್ರಾಣೆ ಎನತ್ತು, ಕೆಳದಿಗೆ ತನತ್ತು ಸಂದಿಸುವ ಎಸಕಂ.

—ಅತ್ತು Attu. 2.=ಅದು(–ಉದು, –ಇತು, –ಇತ್ತು, –ತು) A termination of the third person singular neuter of the imperfect. ಇರ್ದತ್ತು. ಶಿರಃ ಕರೋಟಿನಗುವಂತೆಇರ್ದತ್ತು. ಪಸರಿಸಿವತ್ತು ಮೂಡದೆಸೆಯೊಳ್ ಬೆಳರ್ಗೆಂಪು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಹೆಚ್ಚುಕಡಿಮೆ ಇದೇ ಅರ್ಥದಲ್ಲಿ ಪ್ರಾಚೀನ ತುಳುವಿನ ಅಸ್ದ್ ಅಥವಾ ಅಸ್ಟ್ ಪದವು ಪ್ರಯೋಗಗೊಂಡಿದೆಯೆನ್ನಬಹುದು. ಉದಾ :

ಎನಸ್ದ್–ನನ್ನದು (ನನ್ನ + ಅದು)
ಆಕ್ಣಸ್ದ್–ಆಗಿರುವಂಥದ್ದು (ಆಗಿರುವಂಥ + ಅದು)
ಪಂಡ್ನಸ್ದ್–ಹೇಳಿದ್ದು (ಹೇಳಿದ + ಅದು)
ಉಳ್ಳಸ್ದ್–ಇರುವಂಥಾದ್ದು (ಇರುವಂಥ + ಅದು)
ಕೊಡ್ತ್ನಸ್ದ್–ಕೊಡಿದುದು (ಕೊಡಿದ + ಅದು)
ಜಾಸ್ದ್–ಯಾವುದು (ಯಾವ + ಅದು)

'ಅಸ್ದ್' ಹೊರತಾದ ಕೇವಲ 'ಸ್ದ್'ಕಾರವು ಅಪೂರ್ಣಕ್ರಿಯಾರೂಪಗಳಲ್ಲಿ ಮತ್ತು ಭೂತಕಾಲರೂಪಗಳಲ್ಲಿ ಬಳಕೆಯಾಗುತ್ತದೆ. ಉದಾ : ಆಸ್ದ್, ಆಸ್ದ್ತ್ತ್, ಶುಸ್ದ್ತ್ತ್—ಇತ್ಯಾದಿ.

ಭಾಷೆಯ ಒಂದು ಹಂತದಲ್ಲಿ ಸ್ದ್ಕಾರ ಲೋಪಗೊಂಡ ಉದಾಹರಣೆಗಳೂ ಕಾಣಸಿಗುತ್ತವೆ.

ಪೂಜ್ಯೆಯಾ—ಉಳ್ಳಂಚಿತ್ತಿ
(ಪೂಜ್ಯೆಯಾಸ್ದ್ ಉಳ್ಳಂಚಿತ್ತಿ ಎಂದಾಗಬೇಕಿತ್ತು)
ಛಿನ್ನಾ—ಬೂಳತೊ
(ಛಿನ್ನಾಸ್ದ್ ಬೂಳತೊ ಎಂದಾಗಬೇಕಿತ್ತು)
ಸರಿಯಾ—ಉಳ್ಳ
(ಸರಿಯಾಸ್ದ್ ಉಳ್ಳ ಎಂದಾಗಬೇಕಿತ್ತು)

ಸ್ದ್ಕಾರವನ್ನೊಳಗೊಂಡ ವಿವಿಧ ರೂಪದ ಪದಗಳನ್ನು ಹೀಗೆ ಸಂಗ್ರಹಿಸಬಹುದು—

ಆ್ದ್ಯಾಸ್ದ್ನ್	ಅ್ಂಡಾಸ್ದ್ನಾಯೆ
ಆಕ್ಣಸ್ದ್	ಆಸ್ದ್ತ್ತ್ಂಡ್
ಆಸ್ದ್	ಆಸ್ದ್ತ್ತ್
ಆಸ್ದ್ನವು	ಆಸ್ಟ್ನಾಯೆ
ಆಸ್ದ್ನಸ್ದ್	ಆಸ್ದ್ಪುವ್ಪೊ
ಉಳ್ಳಸ್ದ್	ಕೊಡ್ತ್ನಸ್ದ್
ಬಂಡ್ಸ್ದ್	ಬೋಡಾಸ್ದ್ತ್ತ್
ಪೋಸ್ದ್ತ್ತಿ	ಪ್ರಾಪೀತ್ನಸ್ದ್
ಶೋಭೀಪ್ಣಸ್ದ್	ಜಾಸ್ದ್

—ಇತ್ಯಾದಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪದಾದಿಯಲ್ಲಿ ಬರುವ ಸ್ದ್‌ಕಾರಗಳ ಬಳಕೆ ಇನ್ನಷ್ಟು ಸ್ವಾರಸ್ಯವಾಗಿದೆ. ಉದಾ:

ಸ್ದ್‌ಂಡ್	ಸ್ದ್‌ಡತ
ಸ್ದ್‌ಂಡಾತ್ನಸ್ದ್	ಸ್ದ್‌ಡಪುಟ್ಟ್
ಸ್ದ್‌ಂಡಾಪ್ಪೆರ್	ಸ್ದ್‌ತ್ತಪೊರ್
ಸ್ದ್‌ಂಡಾವರ್ತ್ತೆ	ಸ್ದ್‌ತ್ತಬಿತ್ತಿರ್
ಸ್ದ್‌ಂಡಾಸ್ದ್	ಸ್ದ್‌ದ್ಯೊ
ಸ್ದ್‌ಂಡಾಸ್ದ್‌ತ್ತ್	ಸ್ದ್‌ಪ್ಪುಪೆರ್
ಸ್ದ್‌ಂಡಾಸ್ದ್‌ನ್	ಸ್ದ್‌ಟಿಕರ್ಬಿ
ಸ್ದ್‌ಂಬೆನಿ	ಸ್ದ್‌ಳ್ಯಂಚಿತ್ತಿನಾಯೆ

—ಇತ್ಯಾದಿ

'ಶ್ರೀಭಾಗವತೊ' ಹಾಗೂ ಈ ಗದ್ಯಗ್ರಂಥದ ಪದಗಳಲ್ಲಿ ಕಂಡುಬರುವ ಕೆಲವು ಪ್ರಭೇದಗಳು—

ಶ್ರೀಭಾಗವತೊ	ತುಳು ದೇವೀಮಹಾತ್ಮೆ
ನೆತ್ತ್‌ಪು (ನಿಲ್ಲು)	ನೆಂದ್‌ಪು
ನೆತ್ತ್‌ಪಿ (ನಿಲ್ಲಿರಿ)	ನೇದ್‌ಪುಲೆ
ಚೋಜ್ (ಕಾಣು)	ಶೋಜ್
ಬರ್ (ಬರು)	ಬಟ್
ಜೂ/ಶೂ (ನೋಡು)	ಶೂ/ಶು
ಆಸ್ಟ್ (ಆದು)	ಆಸ್ದ್
ತೆರು (ಬಿಲ್ಲಿನಹಗ್ಗ)	ತೆರ್ವೆತ್ತ್ಯ/ತೆರುವು
ಚುಟಿ (ಸುಳಿ)	ಶುಟ್ಯು

ಭಾಷೆ ಮತ್ತು ಶೈಲಿ

ತುಳುವಿನಲ್ಲಿ ಕರ್ಮಣಿಪ್ರಯೋಗ ಇಲ್ಲವೆಂಬುದು ಈಗಾಗಲೇ ಎಲ್ಲರೂ ಹೇಳುತ್ತಾಬಂದ ವಿಚಾರ. ಆಧುನಿಕ ತುಳುವಿನಲ್ಲಿ ನಾವು ಎಷ್ಟೇ ಪ್ರಯತ್ನಪಟ್ಟರೂ ಒಂದೇ ಒಂದು ಕರ್ಮಣಿಪ್ರಯೋಗವನ್ನು ರಚಿಸಲು ನಮಗೆ ಸೂಕ್ತ ಪದಗಳೇ ಸಿಕ್ಕಲಾರವು. ಆದರೆ ಈ ಗದ್ಯಕಥೆಯಲ್ಲಿ ಬರುವ ಈ ಕೆಳಗಿನ ವಾಕ್ಯಗಳು ನಮಗೆ ಆಶ್ಚರ್ಯವನ್ನುಂಟುಮಾಡುತ್ತವೆ.

(i) ಋಷಿಟಾವ ಬಹುಮಾನಿಪೊವೊಂಡೆರ್

(ii) ರಾಜ್ಯೊ ಎನಟಾವ ಬುಡ್‌ಪೋವಪ್ಪಡ್‌ನ್

(iii) ಪೊಣಜೀವು ಬಾಲೆಕುಳೆಟಾವ ನಿಂಕರಿಪೊವೊಂಡೆ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

(iv) ಶತ್ರುಕುಳೆತ್ತಾವ ಬಾಧಿಪೊವೊಂಡೆ
(v) ಶ್ರೀಹರಿಟಾವ ವಂಚಿಪೋವೊಂಡ್‌ನಾಕುಳು
(vi) ಬ್ರಹ್ಮದೇವೆರೆಟಾವ ಸ್ತುತಿಪೋವೊಂಡೆರ್

ಕೆಲವು ಸಮುಚ್ಚಯ ಬೋಧಕಾವ್ಯಯಂಗಳು ಆಧುನಿಕ ತುಳುವಿಗಿಂತ ತೀರಾ ಭಿನ್ನವಾಗಿವೆ.

(i) ದಂತೊಂತಾವನಾ ಮುಷ್ಟಿಪ್ರಹಾರೊಂತಾವನಾ ಮರಣೊಪ್ರಾಪಿತೆ
(ii) ಆಯ ದೇಹೊಮಿನಾ ಶಿರೊಮಿನಾ ಬೇತೆಬೇತೆ ಆಕೋಯೆ
(iii) ಸುಂಭಾಸುರಳಾ ಪರಮೇಶ್ವರಿಳಾ ಯುದ್ಧೊ ತುಡಂಗ್‌ಸ್ದಿನ್
(iv) ಮಹಿಷಾಸುರನ್ಯಾ ಆಯುಳ್ಳ ಬಲೊಮಿನ್ಯಾ ನಾಶಾಕೋಯರ್
(v) ತಾಮರೆತ ಪುಷ್ಪೊಮಿನ್ಯಾ ತಾಮರೆತ ಮಾಲೆನ್ಯಾ ಸಮುದ್ರರಾಜೆ ಇನ್‌ಕ್‌ತ್ತ್‌ತ್ತ್‌ಡ್ತೆ
(vi) ದೇವೇಕ್‌ಳೆಕ್ ಶತ್ರುವಾ ಉಳ್ಳುಂಚಿತ್ತಿ ಚಾಮುರೆಯ ದೇವಿಕ್ ವಾಹನೊಮಾ ಉಳ್ಳುಂಚಿತ್ತಿ ಸಿಂಹೊಮು ಎಡ್ಡೆಂದೊ ಬಾಹುಕುಳೆಟಾವ ಯುದ್ಧೊ ಮೀನಿ ಬೆಂದೆರ್

ಶ್ರೀಭಾಗವತೊ ಕಾವೇರಿಗಳಲ್ಲಿ ಇರುವ ವಿಭಕ್ತಿಪ್ರತ್ಯಯಂಗಳಲ್ಲದೆ, ಅಲ್ಲಿ ಇಲ್ಲದಿರುವ ಕೆಲವು ವಿಭಕ್ತಿಪ್ರತ್ಯಯಗಳೂ ಈ ಗ್ರಂಥದಲ್ಲಿ ಕಾಣಸಿಗುತ್ತವೆ. ಉದಾ :

ದ್ವಿತೀಯಾ ವಿಭಕ್ತಿ : ಒಮಿನಿ (ಪ್ರಸಂಗೊಮಿನಿ, ಬಲೊಮಿನಿ)

ತೃತೀಯಾ ವಿಭಕ್ತಿ : ಒಂತವ, ಒಂತಾವ(ಸಾಮರ್ಥ್ಯೊಂತವ, ವಿಸ್ತಾರೊಂತಾವ)
ತ್ತಾ (ಬುದ್ಧಿತ್ತಾ, ಆಯೆತ್ತಾ)
ತ್ತಾವ (ಏಕಾಗ್ರಮನಸ್‌ತ್ತಾವ)
ಎತ್ತಾವ (ಶತ್ರುಕುಳೆತ್ತಾವ)
ಟಾವ, ಎಟಾವ (ಬಡವುಟಾವ, ಬಾಲೆಕ್‌ಳೆಟಾವ)

ಚತುರ್ಥೀ ವಿಭಕ್ತಿ : ಎಕಾವ (ಕೌಷ್ಟಿಕೆರೆಕಾವ, ಈರೆಕಾವ)
ಒಂಕಾವ (ವನೊಂಕಾವ, ಸವಿತಾಪೊಂಕಾವ)

ಸಪ್ತಮೀ ವಿಭಕ್ತಿ : ಎಟ್ (ಗಜೊಂಕುಳೆಟ್)
ಎಟ (ಮಾರ್ಕಂಡೇಯೆರೆಟ)
ಎಟ್‌ಪ್ಪ (ರಾತ್ರಿಕ್‌ಳೆಟ್‌ಪ್ಪ)
ಒಂಟ್‌ಪ್ಪ (ಮನ್ವಂತರೊಂಟ್‌ಪ್ಪ)
ಒಂಟ್‌ಪ್ಪುಕ್ (ಸೃಷ್ಟಿಕಾಲೊಂಟ್‌ಪ್ಪುಕ್)
ಉಪ್ಪ (ಆವುಳುಂಪ್ಪ)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕಥೆಯ ಕೊನೆಯ ಭಾಗದಲ್ಲಿ ಬರುವ, ಶಾಂತರಸವನ್ನು ಪ್ರತಿಪಾದಿಸುವ ಒಂದು ಉತ್ತಮ ವರ್ಣನಾಭಾಗ ಹೀಗಿದೆ–

"ಆವುಟ್ ಸುಭಾಸುರೆಯಶಾಸ್ದ್ ನಾಯೆ ಮುದಣಾಯಿ ಸಮಯೊಂಟ್, ಗಂಧರ್ವೇರ್ಕುಳು ಹರ್ಷೊಂತಾವ ಗಾನಾಕೊಯೆರ್ । ವಾಯುದೇವೆರ್ ಪೂಜ್ಯೊವಾಪ್ಪ ವೀಜ್ಯೆರ್ । ದಿವಸೊಂಕ್ಳೆಕ್ ಸ್ವಾಮಿಯಾ ಉಳ್ಳುಚಿತ್ತಿ ಸೂರ್ಯ ದೇವೆರಾಕ್ಳಾರ್, ಯೆಡ್ಡ ಪ್ರಭೆಳ್ಳಾರಾಸ್ದ್ ಭವಿತೆರ್ । ಅಂಚನೆ ಒಟ್ಟುಳ್ಳ ಎಕ್ಷಕಿನ್ನ ರಾದಿಕುಳುಲ ವಾದ್ಯಖೋಷೊವಿನಾಕೊಯೆರ್। ಅಪ್ಸರ ಸ್ತ್ರೀ ಕುಳು ನೃತ್ತಾಕೊಯೆರ್। ಶಾಂತೊವಾಸ್ದ್ ನುಚಿತ್ತಿ ಅಗ್ನಿಕುಳುಲಯೆಡ್ಡೆಂದೊ ಜ್ವಲಿತೆರ್ ।"

ಹೀಗೆ "ತುಳು ದೇವೀಮಹಾತ್ಮೆ"ಯ ಗದ್ಯ ಶೈಲಿಯು ಅಲ್ಲಲ್ಲಿ ಕೆಲವೆಡೆ ಲಘು ಕಾವ್ಯಗುಣಗಳನ್ನೂ ಮೈಗೂಡಿಸಿಕೊಂಡು ಓದಲು ಹೃದ್ಯವಾಗಿದೆ.

ಈ ಅಪೂರ್ವ ತುಳು ಗದ್ಯವನ್ನು ಸಂಪಾದಿಸಿ ಪ್ರಕಟಿಸಲು ಅನುಮತಿ ನೀಡಿದ, ಕಲ್ಲಿಕೋಟೆ ವಿಶ್ವವಿದ್ಯಾನಿಲಯದ ಸಂಸ್ಕೃತ ಪ್ರೊಫೆಸರರಾದ ಡಾ॥ ಯನ್. ವಿ. ಪಿ. ಉಣಿತ್ತಿರಿಯವರಿಗೂ, ಲಿಪ್ಯಂತರಕಾರ್ಯದಲ್ಲಿ ಸಹಕರಿಸಿದ ಶ್ರೀಮತಿ ಪಿ. ಸರಸ್ವತಿ ಅವರಿಗೂ, ಹಸ್ತಪ್ರತಿಯನ್ನೋದಿ ಸೂಕ್ತಸಲಹೆಗಳನ್ನಿತ್ತ ಡಾ॥ ಯು.ಪಿ. ಉಪಾಧ್ಯಾಯ ರಿಗೂ, ಇದರ ಪ್ರಕಟಣೆಯ ಭಾರವನ್ನು ವಹಿಸಿದ ಉಡುಪಿಯ ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರದ ನಿರ್ದೇಶಕರಾದ ಪ್ರೊ॥ ಕು. ಶಿ. ಹರಿದಾಸಭಟ್ಟರಿಗೂ ನನ್ನ ಅನಂತ ಕೃತಜ್ಞತೆಗಳು.

ವೆಂಕಟರಾಜ ಪುಣಿಂಚತ್ತಾಯ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕಥಾಸಾರಾಂಶ

ಅಧ್ಯಾಯ ಒಂದು

ದೇವೀಮಹಾತ್ಮೆಯು ಕಥೆ ಹೀಗೆ ಆರಂಭವಾಗುತ್ತದೆ—ಕೌಷ್ಟಿಕನೆಂಬ ಬ್ರಾಹ್ಮಣನು ಮಾರ್ಕಂಡೇಯರಲ್ಲಿ 'ಸಾವರ್ಣಿ'ಯೆಂಬ ಎಂಟನೆಯ ಮನುವಿನ ಕಥೆಯನ್ನು ತನಗೆ ಹೇಳಬೇಕೆಂದು ವಿಜ್ಞಾಪಿಸುವನು. ಮಾರ್ಕಂಡೇಯರು ಸಾವರ್ಣಿಯ ಪೂರ್ವಜನ್ಮದ ವೃತ್ತಾಂತವನ್ನು ತಿಳಿಸುವರು—

ಸಾವರ್ಣಿಯು ಹಿಂದಿನ ಜನ್ಮದಲ್ಲಿ 'ಸುರಥ'ನೆಂಬ ರಾಜನಾಗಿದ್ದನು. ಆತ ಸಮಸ್ತ ಭೂಮಂಡಲದ ಅರಸು. ಪ್ರಜೆಗಳನ್ನು ತನ್ನ ಮಕ್ಕಳಂತೆ ಕಾಪಾಡುತ್ತಿದ್ದನು.

ಒಂದು ದಿನ ಕೋಲಾವಿಧ್ವಂಸಿಗಳೆಂಬ ಶತ್ರುಗಳು ಅವನ ರಾಜ್ಯವನ್ನು ಆಕ್ರಮಿಸುವರು. ಯುದ್ಧದಲ್ಲಿ ಸೋಲಿಸಿ ಆತನ ಭಂಡಾರದ ಹಣವನ್ನೆಲ್ಲ ಕಸಿಯುವರು. ನಿರ್ಗತಿಕನಾದ ಆತನು ಬೇಟೆಯ ನೆವದಿಂದ ಕುದುರೆಯನ್ನೇರಿ ಕಾಡಿಗೆ ಹೋಗುವನು.

ಅಲ್ಲಿ ಸುಮೇಧಾ ಋಷಿಗಳ ಆಶ್ರಮದ ಬಳಿ ಕೆಲವು ದಿನ ಉಳಕೊಂಡನು. ಆದರೆ ಮನಸ್ಸಿಗೆ ನೆಮ್ಮದಿಯಿಲ್ಲ. ತನ್ನ ರಾಜ್ಯದ, ಸಂಸಾರದ ಚಿಂತೆ ಅವನನ್ನು ಕಾಡತೊಡಗಿತು. ಅದೇ ಚಿಂತೆಯಲ್ಲಿರುವಾಗ ಅಲ್ಲೇ, ಒಬ್ಬ ವೈಶ್ಯನೂ ನಿಂತಿರುವುದನ್ನು ಆತ ನೋಡಿದನು. ಅವನ ಹೆಸರು ಸಮಾಧಿಯೆಂದು. ಮಹಾ ಧನಿಕನಾದ ಅವನ ಸಂಪತ್ತನ್ನೆಲ್ಲ ಲೋಭಿಗಳಾದ ಅವನ ಪತ್ನೀಪುತ್ರರು ಅಪಹರಿಸಿ, ಅವನನ್ನು ದರಿದ್ರನನ್ನಾಗಿ ಮಾಡಿಬಿಟ್ಟಿದ್ದರು. ಈಗ ಗತಿಯಿಲ್ಲದೆ ಅವನೂ ಕಾಡಿಗೆ ಬಂದಿದ್ದಾನೆ. ಇಬ್ಬರು ಸಮಾನ ದುಃಖಿಗಳೂ ಒಂದಾದರು. ಅವರೊಳಗೆ ಪರಿಚಯ ಬೆಳೆಯಿತು.

ಅವರು ಜೊತೆಯಾಗಿ ಸುಮೇಧಾ ಋಷಿಗಳನ್ನು ಸಂದರ್ಶಿಸಿದರು. ತಮ್ಮ ದುಃಖದ ವಿಚಾರವನ್ನು ಅರಿಕೆ ಮಾಡಿಕೊಂಡರು. ಮುನಿಗೆ ಎಲ್ಲವೂ ಅರ್ಥವಾಯಿತು. ಆತ ಉಪದೇಶಿಸುವನು—ಎಲೈ ಸುರಥ ಚಕ್ರೇಶ್ವರ, ನಿಮಗಿಬ್ಬರಿಗೂ ನಿಮ್ಮ ಮನೆಯು–ಸಂಸಾರದ ನೆನಪಾಗುತ್ತಿದೆ. ಅಲ್ಲಿ ಸುಖವಿಲ್ಲದಿದ್ದರೂ ಮನಸ್ಸು ಆ ಕಡೆಗೇ ಸೆಳೆಯಲ್ಪಡುತ್ತದೆ. ಈ ಸೆಳೆತಕ್ಕೇ 'ಮೋಹ'ವೆಂದು ಹೆಸರು. ಮಾನವನಲ್ಲಿ ಈ ರೀತಿಯ ಮೋಹವುಂಟಾಗಲು ಕಾರಣವೇನು ? "ಸಕಲ ಜೀವರಾಸಿಕ್‌ಳೆಸಿಲಾ ಸಂಸಾರಸ್ಥಿತಿಕ್ ಕಾರಣಭೂತೆತಿಯಾ ಉಳ್ಳಂಚಿತ್ತಿ ಮಹಾಮಾಯೆಯಾಕ್‌ಣಾರ್ ತನ ಸಾಮರ್ಥ್ಯಾಂತವ ಮೋಹಿಪ್ಪೋಪ್ಪೆರ್—ಆರ್ ಪ್ರಸನ್ನಾಯೆರ್‌ಂದ್‌ನಾವ್ರುಟ ಮನುಷ್ಯೇರ್ಕುಳೆಕ್ ಮರೊಮಿಣಿ ಕೊಟ್ಪ್‌ಣಾರ್ । ಮೋಕ್ಷೊಮಿಣಿ ಕೊಟ್ಪ್‌ಣಾರ್" ಎಂದು ತಿಳಿಸುವನು.

ಆಗ ಸುರಥ ಮಹಾರಾಜನು "ಮಹಾಮಾಯಾಸ್ವರೂಪಿಣಿಯಾದ ಆ ದುರ್ಗಾ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ದೇವಿಯು ಹೇಗೆ ಉಂಟಾದರು ? ಅವರ ಮಹಿಮೆಗಳೇನು ? ಇವನ್ನೆಲ್ಲ ನಮಗೆ ತಿಳಿಸ ಬೇಕು" ಎಂದು ವಿಜ್ಞಾಪಿಸುವನು.

ಸುಮೇಧಾಋಷಿಯು ದೇವಿಯ ಸೃಷ್ಟಿ ಮತ್ತು ಮಹಿಮೆಗಳ ವಿಚಾರವನ್ನು ಸುರಥ ಸಮಾಧಿಗಳಿಗೆ ತಿಳಿಸುವನು—

ಕಳೆದ ಕಲ್ಪಾವಸಾನ ಕಾಲದಲ್ಲಿ ಶ್ರೀಮನ್ನಾರಾಯಣನು ಸಮುದ್ರದಲ್ಲಿ ಶೇಷ ಶಾಯಿಯಾಗಿದ್ದಾಗ, ಆತನ ಕಿವಿಯ ಕೊಳೆಯಿಂದ ಮಧುಕೈಟಭರೆಂಬ ಇಬ್ಬರು ರಕ್ಕಸರು ಜನಿಸಿದರು. ಅವರು ನಾರಾಯಣದೇವರ ನಾಭಿಕಮಲದಲ್ಲಿ ವಾಸಿಸುತ್ತಿದ್ದ ಬ್ರಹ್ಮದೇವನನ್ನು ಕಂಡು ದುರ್ಬುದ್ಧಿಯಿಂದ ಆತನನ್ನು ಕೊಲ್ಲಲೆಳಸಿದರು. ಬ್ರಹ್ಮನು ಭಯದಿಂದ ಅತ್ತಿತ್ತ ನೋಡಿದ. ನಾರಾಯಣದೇವರು ಯೋಗನಿದ್ರೆಯಲ್ಲಿ ಮುಳುಗಿ ದ್ದಾರೆ ಏನು ಮಾಡೋಣ? ಅವನಿಗೊಂದು ಉಪಾಯ ಹೊಳೆಯಿತು.ಆತ ನಾರಾಯಣ ದೇವರ ಕಣ್ಣುಗಳಲ್ಲಿ ವಾಸವಾಗಿರುವ ದುರ್ಗಾದೇವಿಯನ್ನು ಸ್ತುತಿಸಿದ. ದುರ್ಗಾದೇವಿ ನಾರಾಯಣದೇವರನ್ನು ಎಚ್ಚರಗೊಳಿಸಿದರು. ಅವರು ಕಣ್ತೆರೆದು ನೋಡಿದರು.

ಅವರ ಮುಂದೆ ಮಧುಕೈಟಭರು ನಿಂತಿದ್ದರು. ಅವರೊಳಗೆ ಐದು ಸಾವಿರ ವರ್ಷಗಳ ಪರ್ಯಂತ ದೀರ್ಘ ಸಂಗ್ರಾಮ ನಡೆಯಿತು. ಯಾರೂ ಸೋಲಲಿಲ್ಲ— ಯಾರೂ ಗೆಲ್ಲಲಿಲ್ಲ. ಮಾಯೆ ಮೆಲ್ಲನೆ ಮಧುಕೈಟಭರ ಮನಸ್ಸಿನ ಒಳಹೊಕ್ಕಳು.

ಮಧುಕೈಟಭರು ನಾರಾಯಣದೇವರೊಡನೆ—"ಯೆಂಕ್ಳೆತ್ತ್ ಬೋಜಿತ್ತ್‌ನಂಚಿತ್ತಿ ವರೊವೊನಿ ಪರಿತೊಣ್ಲೆ" ಎಂದು ಆಜ್ಞಾಪಿಸಿದರು.

ಆಗ ನಾರಾಯಣದೇವರು—"ಇತ್ತೆನ್ ಈಕುಳು ಯುದ್ಧೊಂತೌಳು ಸಂತೋಷಿ ತ್ತ್ ವರೊವಿನ್ ಅ್ತ್ತರ್ಪರಾವುಟ ಎಂಕ್ ಈಕ್ಳೆ ಯಿರ್ವೆರೆನಿಲ ಸಂಹರಿಪ್ವಣ- ಅಯ್ಕ್ವರೊ" (ನೀವು ಯುದ್ಧದಲ್ಲಿ ಸಂತೋಷಪಟ್ಟು ವರವನ್ನು ಕೊಡುವಿರೆಂದಾದರೆ, ನಾನು ನಿಮ್ಮನ್ನು ಇಬ್ಬರನ್ನೂ ಸಂಹರಿಸುವಂತಾಗಬೇಕು. ಅದೇ ನಾನು ಬೇಡುವ ವರ) ಎಂದರು.

ಅದಕ್ಕೆ ಮಧುಕೈಟಭರು "ಏ ಸ್ಥಲೊಂಟ್ ಉದಕೋದ್ಯಂತಿ ಭೂಮ್ಯಾಕ್ಣ ಸ್ದ್ಂಡ್, ಆ ಸ್ಥಲೋಟ್ ಎಂಕ್ಳೆನಿ ಸಂಹರಿಪ್ಲೆ" ಎಂದು ಉತ್ತರಿಸಿದರು.

ನಾರಾಯಣದೇವರು ಮಧುಕೈಟಭರನ್ನು ತಮ್ಮ ತೊಡೆಯ ಮೇಲೆ ಮಲಗಿಸಿ, ಚಕ್ರದಿಂದ ಅವರ ಶಿರಸ್ಸುಗಳನ್ನು ಕತ್ತರಿಸಿದರು.

ಅಧ್ಯಾಯ ಎರಡು

ಮಹಿಷಾಸುರನಿಗೂ ದೇವೇಂದ್ರನಿಗೂ ನೂರು ವರ್ಷಗಳ ಕಾಲ ಘೋರ ಸಂಗ್ರಾಮ ಜರಗಿತು. ಸಂಗ್ರಾಮದಲ್ಲಿ ದೇವತೆಗಳನ್ನು ಸೋಲಿಸಿದ ಮಹಿಷಾಸುರನು ಸ್ವರ್ಗದ ರಾಜನಾದನು. ದೇವತೆಗಳು ಹತಾಶರಾಗಿ, ಬ್ರಹ್ಮದೇವನ ಜೊತೆಯಲ್ಲಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಹರಿಹರರಿದ್ದಲ್ಲಿಗೆ ತೆರಳಿ "ಯೆಂಕುಳೆಂಕ ಆಜೋಪ್ಪಿ ಅಧಿಕಾರೊಕುಳೆಸಿಲ, ಒರ್ತಳ್ಳ ದೇವೇರ್ಕುಳೆಕುಳ್ಳ್ಯುಚಿತ್ತ್ಯೇ ಅಧಿಕಾರೊಕುಳೆನಿಲ, ಆ ಮಹಿಷಾಸುರೆ ತಾನೇ ಪ್ರವರ್ತಿತ್ತೊಂಡ್ ನೀತೆರ್ೊಂಡ್ಳ್ಳೆ. ಎಂಕುಳು ಶರಣಾಗತೇರ್ಕುಳಾಪ್ಪೊಂಡ್[illegible] (ನಾವು ನಡೆಸುತ್ತಿದ್ದ ಅಧಿಕಾರಗಳನ್ನೂ, ಇತರ ದೇವತೆಗಳ ಅಧಿಕಾರಗಳನ್ನೂ ಆ ಮಹಿಷಾಸುರನೇ ನಡೆಸುತ್ತಾ ಬರುತ್ತಿದ್ದಾನೆ. ನಾವು ನಿರುಪಾಯರಾಗಿ ನಿಮ್ಮ ಶರಣು ಬಂದಿದ್ದೇವೆ) ಎಂದು ಬಿನ್ನವಿಸುವರು.

8311

ತಕ್ಷಣ ನಾರಾಯಣದೇವರ ಮುಖದಿಂದ ಒಂದು ಮಹಾತೇಜಸ್ಸು ಹೊರಟಿತು. ಕೂಡಲೇ ಅಲ್ಲಿ ನೆರೆದಿದ್ದ ಎಲ್ಲ ದೇವರುಗಳ ಶರೀರದಿಂದಲೂ ಬೇರೆ ಬೇರೆ ತೇಜಸ್ಸುಗಳು ಹೊರಟುವು. ಅವೆಲ್ಲ ಒಂದೆಡೆ ಐಕ್ಯವಾದುವು. ಆ ಕಾಂತಿಗಳ ರಾಶಿಯೇ ಒಂದು ಸ್ತ್ರೀಯ ರೂಪವಾಗಿ ಪರಿಣಮಿಸಿತು. ಎಲ್ಲ ದೇವತೆಗಳೂ ತಂತಮ್ಮ ಆಯುಧಗಳಿಂದ ಪ್ರತ್ಯಾಯುಧಗಳನ್ನು ನಿರ್ಮಿಸಿ ಆಕೆಗಿತ್ತರು. ಹಿಮಾಲಯನು ಆಕೆಗೆ ವಾಹನವಾಗಿ ಒಂದು ಸಿಂಹವನ್ನಿತ್ತನು. ದೇವಿ ಒಮ್ಮೆಲೇ ಅಟ್ಟಹಾಸ ಗರ್ಜನೆಮಾಡಿದಳು.

ಗರ್ಜನೆ ಕೇಳಿದ ಮಹಿಷಾಸುರನು ಅಲ್ಲಿಗೆ ಓಡಿಬಂದನು. ಯುದ್ಧ ಆರಂಭವಾಯಿತು. ಮಹಿಷಾಸುರನ ಸೇನಾಧಿಪತಿಯಾದ ಚಿಕ್ಷುರ, ಚಾಮರ, ಉದಗ್ರ, ಮಹಾಹನು, ಅಸಿಲ, ಬಾಷ್ಕಳ, ಬಿಡಾಲ ಮುಂತಾದ ಎಲ್ಲ ರಕ್ಕಸರೂ ಯುದ್ಧಕ್ಕೆ ಅಣಿಯಾದರು. ದೇವಿಯು ಅವರನ್ನು ನೋಡಿ ದೀರ್ಘನಿಶ್ವಾಸವನ್ನು ಬಿಟ್ಟಳು. ಆ ನಿಶ್ವಾಸದ ವಾಯುವಿನಿಂದ ಒಂದು ಲಕ್ಷ ಭೂತಗಣಗಳು ಸೃಷ್ಟಿಯಾದುವು. ಎಲ್ಲವೂ ಅಸುರಶಕ್ತಿಯ ನಾಶಕ್ಕೆ ತೊಡಗಿದುವು.

"ಶಿಲು ಭೂತಗಣೊಕುಳು ಪಟಹೊಕ್ಳೆನಿ ಧ್ವನಿಪೋಯೊ। ಶಿಲುಭೂತಗಣೊಕುಳು ಶಂಖೊಕ್ಳೆನಿ ಪೂರಿತೊ । ಅಂಚನೆ ಪೊರ್ಲ್ತಳ್ಳ ಭೂತಗಣೊಕುಳು ಮರ್ದಳೊಕ್ಳೆನಿ ಪತ್ತೊಂಡ್ ಧ್ವನಿಪೋಯೊ।" ಹೀಗೆ ಯುದ್ಧವೆಂಬ ಮಹೋತ್ಸವದಲ್ಲಿ ಭೂತಗಣಗಳೂ ಭಾಗವಹಿಸಿದುವು. ದೇವಿಯು ಕ್ಷಣಾರ್ಧದಲ್ಲಿ ರಕ್ಕಸರ ಬಲವನ್ನು ತಗ್ಗಿಸಿದಳು.

ಅಧ್ಯಾಯ ಮೂರು

ಮಹಿಷಾಸುರನ ಬಲ ನಷ್ಟವಾಗುತ್ತಿರುವುದನ್ನು ಕಂಡ ಸೇನಾಧಿಪತಿಯಾದ ಚಿಕ್ಷುರನು ಕೋಪದಿಂದ ದೇವಿಯ ಮೇಲೆ ಬಾಣಗಳ ಮಳೆ ಸುರಿಸಿದನು. ದೇವಿ ಆತನ ರಥ, ಸಾರಥಿ, ಕುದುರೆಗಳನ್ನು ಖಂಡಿಸಿ, ಆತನನ್ನು ಗಾಯಗೊಳಿಸಿದಳು. ಆತ ಖಡ್ಗವನ್ನೆತ್ತಿ ದೇವಿಯ ಎಡಭುಜಕ್ಕೂ, ವಾಹನವಾದ ಸಿಂಹಕ್ಕೂ ಹೊಡೆದನು. ಅದು ಪ್ರಯೋಜನವಾಗಲಿಲ್ಲ. ಆತ ಶೂಲವನ್ನೆತ್ತಿದ. ದೇವಿಯೂ ಶೂಲಾಯುಧದಿಂದ ಹೊಡೆದಳು. ಚಿಕ್ಷುರನು ಮರಣಹೊಂದಿದನು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಆಗ ಆನೆಯ ಮೇಲೆ ಕುಳಿತ ಚಾಮರನೆಂಬ ರಕ್ಕಸನು ಮುಂದೆ ಬಂದು ಶಕ್ತಿ ಎಂಬ ಆಯುಧವನ್ನು ಪ್ರಯೋಗಿಸಿದನು. ದೇವಿಯ ಹುಂಕಾರದಿಂದಲೇ ಆ ಶಕ್ತಿಯು ನಿಷ್ಪ್ರಭೆಯಾಗಿ ನೆಲಕ್ಕೆ ಉರುಳಿತು. ಅಷ್ಟರಲ್ಲಿ ದೇವಿಯ ವಾಹನವಾದ ಸಿಂಹವು ಮುಂದೆ ಬಂದು ಆತನನ್ನು ವಧಿಸಿತು. ಉದಗ್ರ, ಕರಾಳ, ತಾಮ್ರ, ಅಂಧಕ, ಉಗ್ರಾಸ್ಯ ಉಗ್ರವೀರ್ಯ, ಮಹಾಹನು, ದುರ್ಧರ್ಷ, ದುರ್ಮುಖ ಮುಂತಾದ ರಕ್ಕಸರನ್ನೆಲ್ಲ ದೇವಿ ವಧಿಸಿದಳು.

ತನ್ನ ಬಲವೆಲ್ಲ ನಷ್ಟವಾದುದನ್ನು ಕಂಡು ಮಹಿಷಾಸುರನು ಮಹಿಷನ ಸ್ವರೂಪವನ್ನು ತಾಳಿ, ದೇವಿಯ ನಿಶ್ವಾಸದಿಂದ ಹುಟ್ಟಿದ ಭೂತಗಣಗಳನ್ನು ಹಾಯ್ದು ತುಳಿದು ನೆಲಕ್ಕುರುಳಿಸಿದನು. ಕಾಲಗೊರಸುಗಳಿಂದ ಭೂಮಿಯನ್ನು ಗೀರಿದನು. ಕೋಡುಗಳಿಂದ ಪರ್ವತಗಳನ್ನು ಬೀಳಿಸತೊಡಗಿದನು. ಆತ ಬಾಲವನ್ನು ಕಡಲಲ್ಲಿ ಮುಳುಗಿಸಿ ಮೇಲೆ ಬೀಸಿದಾಗ ಪರ್ವತಗಳು ಒದ್ದೆಯಾದುವು. ಕೋಡುಗಳ ಹಾಯುವಿಕೆಗೆ ಮೋಡಗಳು ಪುಡಿಪುಡಿಯಾದುವು. ಅವನ ಉಸುರಿನ ಗಾಳಿಗೆ ಗ್ರಹನಕ್ಷತ್ರಗಳು ಉದುರಿದುವು. ದೇವಿಯು ಕೋಪದಿಂದ ಪಾಶವನ್ನು ಎಸೆದು ಆತನನ್ನು ಬಂಧಿಸಿದಳು. ಆತ ಕೋಣನ ರೂಪವನ್ನು ತೊರೆದು ಸಿಂಹದ ರೂಪವನ್ನು ತಾಳಿದನು. ದೇವಿಯು ಆ ಸಿಂಹದ ತಲೆಯನ್ನು ಕಡಿಯುವಷ್ಟರಲ್ಲಿ ಆತ ಮನುಷ್ಯರೂಪವನ್ನು ತಾಳಿ ಕತ್ತಿ ಗುರಾಣಿಗಳೊಂದಿಗೆ ಪ್ರತ್ಯಕ್ಷನಾದನು. ಮರುಕ್ಷಣದಲ್ಲೇ ಆನೆಯಾಗಿ, ದೇವಿಯ ವಾಹನವಾದ ಸಿಂಹವನ್ನು ತನ್ನ ಸೊಂಡಿಲಿನಿಂದ ಎಳೆಯತೊಡಗಿದನು. ದೇವಿ ಸೊಂಡಿಲನ್ನು ಕಡಿದುಹಾಕಿದಳು. ಪುನಃ ಕೋಣನ ರೂಪವನ್ನು ತಾಳಿದನು. ಆಗ ದೇವಿಯು ಮಧುಪಾನ ಮಾಡುತ್ತಾ ಹೀಗೆಂದಳು—

"ಎಲೆ ಮೂಢೆಯಾ ಉಳ್ಳುಂಚಿತ್ತಿ ಮಹಿಷಾಸುರ, ಕ್ಷಣಂ ಪೊಟ್ಟ್ ಘರ್ಜಿಪುಲ । ಏತಟನ್ನಾಪುಕ ಮಧುಪಾನೊಮಿನಿ ಬೆನ್ಪೆನೇನ್ । ಆತ್‌ನೇಟ್ಟ್ ಘರ್ಜಿಪುಲ । ಆಯೆ ಅನಂತರೊಂಟ್ ಯೆನಟಾವ ಇಯ್ಯಿ ಮರಣಾವರ್ತ್ತ । ಆ ಸಮಯೊಂಟ್ ದೇವೇರ್ಕುಳಾಸ್ದ್ನಾಕುಳು ವೇಗಿತ್‌ತ್ತ್ ಘರ್ಜಿಪೆರ್‌ತ್ತರ್" ಎಂದು.

ಇಷ್ಟು ಹೇಳುತ್ತಲೇ ಅಲ್ಲಿಂದ ಜಿಗಿದು ದೇವಿ ಮಹಿಷಾಸುರನ ಬಳಿ ಬಂದು, ಆತನನ್ನು ತುಳಿದು, ಆತನ ಕೊರಳನ್ನು ಶೂಲದಿಂದ ತಿವಿದಳು. ಆತನ ತಲೆಯನ್ನು ಕಡಿದಳು. ಮೂರು ಲೋಕಕ್ಕೂ ಆನಂದವಾಯಿತು. ಎಲ್ಲರೂ ಜಯಘೋಷ ಮಾಡಿದರು.

ಅಧ್ಯಾಯ ನಾಲ್ಕು

ಇಂದ್ರಾದಿದೇವತೆಗಳು ದೇವಿಯನ್ನು ಸ್ತುತಿಸಿದರು. "ನಂಕ್ ಶುಭೊಂಕ್‌ಲೆನಿ ಅನುಗ್ರಹಿಪಡ್" ಎಂದು ಬೇಡಿಕೊಂಡರು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

"ಎಲೆ ಶೋಭೀಪ್ಪಿ ದುರ್ಗಾದೇವಿಯೆ, ಈರ್ ಶುಭಸ್ವರೂಪಿಯಾಸ್ದ್ನಾರ್ । ಶ್ರೇಷ್ಠೊಮಾ ಉಳ್ಳುಂಚಿತ್ತಿ ಋಗ್ವೇದೊ, ಯಜುರ್ವೇದೊ, ಸಾಮವೇದೊನ್ಪ್ಪಿ ವೇದೊಂಕ್ಳೆಟ್ಪ್ಪ, ಪದಕ್ರಮೊ ಅರುಣೊಸೂತ್ರೊ ಬ್ರಹ್ಮೋಂದ್ ಅಂಬೆಟ್ಪ್ಪಕ್ ಸನ್ನಿಧಾನೊಮಾಪೊಂಡ್ಳ್ಯಾರ್ । ಆ ಕಾರಣೊಂತಾವ 'ಗುಣತ್ರೈ'ನ್ಪ್ಪಿ ನಾಮಧೇಯೊಳ್ಯಾರ್ । ಸಂಸಾರಹೇತುಕ್ ಮಾತ್ರಾಸ್ವರೂಪಿಯಾಸ್ದ್ನಾರ್ । ಸಮಸ್ತ ಜಗತ್ತ್ತಿಕ್ ಬರ್ಪಿಂಚಿತ್ತಿ ಕ್ಲೇಶೊಮಿಂಸಿ ಪರಿಹರೀಪ್ಣಾರ್ ।" ಎಂದು ಪ್ರಾರ್ಥಿಸಿದರು.

"ಎಲೆ ದುರ್ಗಾದೇವಿಯೆ, ಈರೆಕ್ಳುಂಚಿತ್ತಿ ಮುಖಕಮಲೊಮಾಕ್ಣಸ್ದ್, ನಸುಂತೆಳಿಕೆತ್ತಾವ ಕೂಡೊಂಡ್ ನಿರ್ಮಲೊಮಾಯಿ, ಚಂದ್ರಮಂಡಲೋತಜ್ಯೋತಿ ಕಾಂತಿಟಾವ ಕೂಡೊಂಡ್ತ್ತ್ ಪದಿನಾಜಿ ಕಲೆ ಪರಿಪೂರ್ಣೊಮಾವ ಶೋಭೀಪ್ಣಸ್ದ್ । ಅಂಚಿತ್ತಿ ಮುಖಕಮಲೊಮಿಂಸಿ ಮಹಿಷಾಸುರೆಯಾಸ್ದ್ನಾಯೆ ಶುಸ್ದ್ತ್ತ್, ಯಾರೆಟ್ಪ್ಪಕ್ ಯುಂದ್ಧೊ ಬೆಂದೆ । ಅಸ್ದ್ ಅತ್ಯಂತೊ ಆಶ್ಚರ್ಯೊ" ಎಂದು ದೇವಿಯು ಮುಂದೆ ತಮ್ಮ ಅಚ್ಚರಿಯನ್ನು ವ್ಯಕ್ತಪಡಿಸಿದರು.

ಅವರ ಸ್ತುತಿಯಿಂದ ಪ್ರಸನ್ನಳಾದ ದೇವಿಯು 'ಯೆನಟ್ತ್ತ್ ಬೋಟ್ತಿ ವರೊಮಿಂಸಿ ಮರಿತೊಣ್ಲೆ' ಎಂದಳು. ಆಗ ದೇವತೆಗಳು 'ಈರೆಸಿ ಸ್ಮರಿಪುನಾಪುಕ ಸ್ಮರಿಪುನಾಪುಕ ಎಂಕ್ಳೆಕ್ ಬರ್ಪಿಂಚಿತ್ತಿ ಆಪತ್ತ್ಕುಳೆನಿ ಚೆಟ್ಪೋವೊಡು' ಎನ್ನುವರು. 'ಅಂಚನೆ ಆವು' ಎಂದು ಅಭಯವಿತ್ತು, ದೇವಿಯು ಅಂತರ್ಧಾನಳಾಗುವಳು.

ಅಧ್ಯಾಯ ಐದು

ಶುಂಭನಿಶುಂಭರೆಂಬ ದಾನವರು ತಪಸ್ಸಿನ ಮೂಲಕ ಬ್ರಹ್ಮನನ್ನು ಮೆಚ್ಚಿಸಿ, ಬೇಕಾದ ವರಗಳನ್ನು ಪಡೆದು, ಗರ್ವಿತರಾಗಿ ದೇವತೆಗಳನ್ನು ಸ್ವರ್ಗದಿಂದ ಓಡಿಸಿದರು. ಗತಿಹೀನರಾದ ದೇವತೆಗಳು ಭೂಲೋಕಕ್ಕೆ ಬಂದು, ಮನುಷ್ಯರಂತೆ ಅಲೆದಾಡುತ್ತಾ ಕೊನೆಗೆ ಹಿಮಾಲಯಪರ್ವತಕ್ಕೆ ಹೋಗಿ ಅಲ್ಲಿ ದುರ್ಗಾದೇವಿಯನ್ನು ಸ್ತುತಿಸುವರು. ಅದೇ ವೇಳೆಗೆ ಪಾರ್ವತೀದೇವಿಯು ಗಂಗಾಸ್ನಾನಕ್ಕಾಗಿ ಹೊರಟವಳು, ಅಲ್ಲಿರುವ ದೇವತೆಗಳನ್ನು ಕಂಡು 'ಎಲೆ ದೇವೇರ್ಕುಳಾಸ್ದ್ನಾಕುಳೆ, ಈಕುಳು ಏರೆ ಮುನ್ನಸ್ತುತೀಪ್ಣ? ಈಕುಳೆಟಾವ ಸ್ತುತಿಪೋವೊಣ್ಪ್ಣಾರ್ ಮಹಾಪೊರ್ಳೆತಿಯಾಸ್ದ್ನಾರ್' ಎಂದು ಹೇಳುತ್ತಿದ್ದಂತೆಯೇ ಆಕೆಯ ಶರೀರದಿಂದ ಪರಮೇಶ್ವರಿಯು ಅವತರಿಸಿದಳು. ಆ ಪರಮೇಶ್ವರಿಯು ಪಾರ್ವತಿಯೊಡನೆ 'ಸುಂಭನಿಸುಂಭೇರ್ಕುಳೆಟಾವ ಪರಾಜಯೊ ಪ್ರಾಪಿಪೋವೊಂಡ್ನುಂಚಿತ್ತಿ ದೇವೇರ್ಕುಳೆಟಾವ ಸ್ತುತಿಪೋವೊಣ್ಪ್ಣ ಏನ್ಂದಾ" ಎಂದು ಆಜ್ಞಾಪಿಸುವಳು.

ಪಾರ್ವತೀದೇವಿಯ ಶರೀರದಿಂದ ಅವತರಿಸಿದ ಕಾರಣದಿಂದ ಪರಮೇಶ್ವರಿಗೆ 'ಕೌಶಿಕಾದೇವಿ' ಎಂಬ ಹೆಸರಾಯಿತು. ಈಗ ಪಾರ್ವತಿಯ ಶರೀರವು ಕಪ್ಪಾಗಿ ಕಾಣ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ತೊಡಗಿತು. ಈ ಕಾರಣದಿಂದಲೇ ಆಕೆಗೆ 'ಕಾಳಿಕಾದೇವಿ' ಎಂಬ ಹೆಸರು ಪ್ರಸಿದ್ಧವಾಯಿತು. ಆಕೆ ತಾನು "ಸುಂಭನಿಸುಂಭಾಸುರೇರ್ಕ್ಳೆನಿ ಸುಂಹರಿಪರ್ತೈನ್ (=ಸಂಹರಿಸಲಿರುವೆನು)" ಎಂದು ದೇವತೆಗಳೊಡನೆ ಹೇಳುವಳು. ಆಕೆಯ ಮಾತಿನಿಂದ ನೆಮ್ಮದಿಹೊಂದಿದ ದೇವತೆಗಳು ಅಲ್ಲಿಂದ ಮರಳಿದರು.

ಇತ್ತ ಅಂಬಿಕಾದೇವಿಯು ಹಿಮಾಲಯ ಶಿಖರದಲ್ಲಿ ಚಿನ್ನದ ಉಯ್ಯಾಲೆಯಲ್ಲಿ ಕುಳಿತು, ಹಾಡುತ್ತಾ, ನಗುನಗುತ್ತಾ ಬಹುಕಾಲ ವಾಸಿಸುತ್ತಿರಲು, ಒಂದು ದಿನ ಶುಂಭನಿಶುಂಭರ ಸೇವಕರಾದ ಚಂಡಮುಂಡರು ಆಕೆಯನ್ನು ಕಂಡರು. ಕೂಡಲೇ ಶುಂಭಾಸುರನ ಬಳಿಗೆ ಹೋಗಿ 'ಯೇರೋವೊರ್ಲ್ತ್ ಸ್ತ್ರೀಯರ್ಕ್ಲಾರ್ ತುಂಕ್ಳುಚಿತ್ತೀ ಕಾಂತಿತ್ತಾವ ಹಿಮಂತ್ಪರ್ವತೊಮಿನಿ ಬೆಟ್ಟಾಕೊವೊಂಡ್ ನೀತೆರ್ಲೊಂಡ್ಳೈರ್' ಎಂದು ವರದಿಮಾಡುವರು. "ಲೋಕದಲ್ಲಿರುವ ಎಲ್ಲ ವಿಧದ ರತ್ನಗಳೂ ನಿನ್ನ ಬಳಿಯಲ್ಲಿವೆ. ನಾವು ನೋಡಿರುವ ಆ 'ಸ್ತ್ರೀ'ಯೆಂಬ ರತ್ನ ಮಾತ್ರ ನಿನ್ನ ಬಳಿಯಲ್ಲಿಲ್ಲ. ನೀನೇಕೆ ಅಂಥಾರತ್ನವನ್ನು ಪಡೆಯಬಾರದು–ಎಂದು ದುರ್ಬೋಧನೆ ನೀಡುವರು. ಶುಂಭಾಸುರನ ಮನಸ್ಸು ಕಲಕಿತು. ಆತ "ಕಾಮದೇವೆರೆಟಾವ ಅಭೀಷ್ಟೊಮಾ ಉಳ್ಳುಚಿತ್ತಿ ಮನಸ್ಸ್ಳ್ಳಾಯೆ" ಆದನು.

ಶುಂಭಾಸುರನು ಸುಗ್ರೀವನೆಂಬ ದೂತನನ್ನು ದೇವಿಯ ಬಳಿಗೆ ಕಳುಹಿಸಿದನು. ಸುಗ್ರೀವನು ತನ್ನ ಒಡೆಯನಾದ ಶುಂಭನ ಬಳಿಗೆ ದೇವಿಯು ಬರುವಂತೆ ಒತ್ತಾಸೆ ಹೇರುವನು. ಆಕೆ "ಜಾವೊರಿಯೆನನಿ ಯುದ್ಧೊಂಟ್ಪ್ಪಕ್ ಜಯಿಪುವೆ ? ಜಾವೊರಿಯೆನ ಗರ್ವೊಮಿನಿ ಒಡ್ಪುವೆ ? ಆಯೆ ಎಂಕ್ ಭರ್ತಾವು ಆವೊಡೂಂದಿಂಚ ಪ್ರತಿಜ್ಞೆ ಪಂಡೊಣ್ತೈನ್" "ಆದ್ದರಿಂದ ನಿನ್ನ ಒಡೆಯನು ಒಂದು ನನ್ನನ್ನು ಯುದ್ಧದಲ್ಲಿ ಗೆದ್ದು ನನ್ನ ಕೈಹಿಡಿಯಲಿ" ಎನ್ನುವಳು. ಸುಗ್ರೀವನು ಹಾಗೆಯೇ ಹೋಗಿ ತನ್ನ ಒಡೆಯನಲ್ಲಿ ವರದಿ ಮಾಡುವನು.

ಅಧ್ಯಾಯ ಆರು

ಸುಗ್ರೀವನ ಮೂಲಕ ದೇವಿಯು ಹೇಳಿ ಕಳುಹಿಸಿದ ಮಾತುಗಳನ್ನು ಕೇಳಿ ಶುಂಭನಿಗೆ ಕೋಪವು ನೆತ್ತಿಗೇರುವುದು. ಆತ ಧೂಮ್ರಲೋಚನನೆಂಬ ರಕ್ಕಸನನ್ನು ಕರೆದು "ದುಷ್ಟೆತಿಯಾ ಉಳ್ಳುಚಿತ್ತಿ ಕರ್ತವೆತ್ತಿನಿ ತರೆಮುಡಿಪತ್ತ್ ಒಯಿತ್ತ್ ಯೆನ ಸಮಿಪೊಂಕಾವ ಕೊಂಡಲ್ಲ" ಯೆನ್ನುವನು. ಆತ ದೇವಿಯ ಬಳಿಗೆ ಹೋಗಿ "ಸುಂಭನಿಸುಂಭಾಸುರೇರ್ಕುಳೆ ಸಮಿಪೊಂಕ್ ಬಲ್ಲೆ, ಬರ್ಪುಣ್ದ್ದಿಂದ್ತ್ತಾವುಟ, ಯಿಾರೆನಿ ಬಲತ್ಕಾರೊಂತಾವ ತರೆಮುಡಿಪತ್ತ್ ಒಯಿತ್ ಕೊಂಡೋವೆನೇನ್" ಎನ್ನುವನು. ದೇವಿಗೂ ಧೂಮ್ರಲೋಚನನ ಕಡೆಯ ಸೈನಿಕರಿಗೂ ಸಂಗ್ರಾಮವಾಗುವುದು; ಕೊನೆಗೆ ಧೂಮ್ರಲೋಚನನು ಸಾಯುವನು. ಈ ವಿಚಾರ ತಿಳಿದ ಶುಂಭಾಸುರನು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕೂಡಲೇ ಚಂಡಮುಂಡರನ್ನು ಕಳುಹಿ "ಆ ಸ್ತ್ರೀನಿ ಪತ್ತ್ ಕಟ್ಟ್ ಶೀಘ್ರೊಂತಾವ ಕೊಂಡಲ್ಲೆ" ಎಂದು ಆಜ್ಞಾಪಿಸುವನು.

ಅಧ್ಯಾಯ ಏಳು

ಚಂಡಮುಂಡಾದಿ ರಕ್ಕಸರು 'ಏನ್‌ನುಂಬು ಏನ್‌ನುಂಬು' ಉತ್ಸಾಹದಿಂದ ಓಡುತ್ತಾ ದೇವಿಯನ್ನು ಸಮೀಪಿಸುವರು. ಆ ದುಷ್ಟರನ್ನು ಕಂಡೊಡನೆ ದೇವಿಯು ಕೋಪಿಸುವಳು. ಆಕೆಯ ಹಣೆಯಿಂದ ಭದ್ರಕಾಳಿ ಜನಿಸುವಳು. ಚಂಡಮುಂಡರ ಸೈನ್ಯವನ್ನು ಭಕ್ಷಿಸಲು ತೊಡಗುವಳು. ಅವರು ಎಸೆಯುವ ಅಸ್ತ್ರಗಳನ್ನು ಹಲ್ಲುಗಳಿಂದ ಕಚ್ಚಿ ಕಚ್ಚಿ ಪುಡಿಪುಡಿ ಮಾಡುವಳು. ಚಂಡಮುಂಡರನ್ನು ವಧಿಸುವಳು. ಅವರ ತಲೆಗಳನ್ನು ಎತ್ತಿಕೊಂಡು ಚಂಡಿಕಾದೇವಿಯ ಬಳಿಗೆ ಹೋಗಿ "ಚಂಡಮುಂಡೇರ್ಕುಳೆನ್ ಪ್ಣಂಚಿತ್ತಿ ಪಶುಕ್ಳೆನಿ ಸಂಹಾರೊಬೇಂಡ್‌ತ್ತ್‌ಕೊಂಡತೆನ್" ಎನ್ನುವಳು. "ನೀನು ಚಂಡಮುಂಡರನ್ನು ವಧಿಸಿದ ಕಾರಣದಿಂದ 'ಚಾಮುಂಡಾದೇವಿ'ಯೆಂಬ ಹೆಸರಿನಿಂದ ಮುಂದೆ ಪ್ರಸಿದ್ಧಳಾಗುವಿ"ಯೆಂದು ಚಂಡಿಕಾದೇವಿಯು ಭದ್ರಕಾಳಿಗೆ ತಿಳಿಸುವಳು.

ಅಧ್ಯಾಯ ಎಂಟು

ಚಂಡಮುಂಡರ ವಧೆಯ ವಾರ್ತೆಯನ್ನು ತಿಳಿದ ಶುಂಭಾಸುರನು ಕೋಪದಿಂದ "ಇತೆನ್ ಸಮಸ್ತಬಲೊಂತಾವ ಕೂಡೊಂಡ್‌ತ್ತ್ ಉದಾಯುಧೇರ್ಕುಳುನ್ಪ್ಪಿ ದೈತ್ಯೇರ್ಕುಳಾಸ್ದ್‌ನಾಕುಳು ಎಣ್‌ಪತ್ತ್ಯಾಜಿ ಕುಲಂತಾಕುಳು ಬರಡ್. ಕಂಬುಕುಳುನ್ಪ್ಣಕುಳು ಎಣ್‌ಪತ್ತ್‌ನಾಲ್ ಕುಲಂತಾಕುಳು ಬರಡ್. ಕೋಟಿವೀರ್ಯೇರ್ಕುಳು ಆಕ್ಣಾಕುಳು ಐಯ್ವೊ ಕುಲಂತಾಕುಳು ಬರಡ್ .." ಹೀಗೆ ಸಮಸ್ತ ಸೈನ್ಯವೂ ಬರುವಂತೆ ಆಜ್ಞಾಪಿಸುವನು. ಎಲ್ಲರೂ ಸಿದ್ಧರಾಗಿ ಹೊರಡುವಷ್ಟರಲ್ಲಿ ಅನೇಕ ಉತ್ಪಾತಗಳುಂಟಾದುವು. ಅಪಶಕುನಗಳು ಕಾಣಿಸಿದುವು. ಅವನ್ನೆಲ್ಲ ಲಕ್ಷ್ಯಮಾಡದೆ ಶುಂಭಾಸುರನು ಹಿಮಾಲಯ ಶಿಖರಕ್ಕೆ ಸಾಗಿದನು.

ಶುಂಭಾಸುರನ ಸೇನೆಯ ಗದ್ದಲವನ್ನು ಕೇಳಿದ ದೇವಿಯು ಬಿಲ್ಲಿನಿಂದ ಠಂಕಾರಧ್ವನಿಯನ್ನು ಹೊರಡಿಸಿದಳು. ಆಕೆಯ ವಾಹನವಾದ ಸಿಂಹವೂ, ಭದ್ರಕಾಳಿಯೂ ಭಯಾನಕವಾಗುವಂತೆ ಗರ್ಜಿಸಿದರು. ದೇವತೆಗಳೆಲ್ಲರೂ ತಂತಮ್ಮ ಶರೀರದಿಂದ ತಮ್ಮದೇ ಪ್ರತಿರೂಪಗಳನ್ನು ಸೃಷ್ಟಿಸಿಕೊಂಡು, ತಂತಮ್ಮ ವಾಹನ ಮತ್ತು ಆಯುಧಗಳೊಂದಿಗೆ ದೇವಿಗೆ ಸಹಾಯಕರಾಗಿ ಆಕೆಯ ಬಳಿ ಸೇರಿದರು. ಶಿವದೇವರು ದೂತಿವೇಷವನ್ನು ಧರಿಸಿ, ದೇವಿಯ ಬಳಿ ಬಂದು "ಅಸುರೇರ್ಕುಳೆನಿ ಶೀಘ್ರೊಂತಾವ ಸಂಹರಿಪುಲೆ" ಎಂದು ಆಜ್ಞಾಪಿಸಿದರು. ಆಗ ದುರ್ಗೆಯ ಶರೀರದಿಂದ ಶ್ರೀಚಂಡಿಕಾದೇವಿಯು 'ಶಕ್ತಿಸ್ವರೂಪಿ'ಯಾಗಿ ಅವತರಿಸಿ ಕಾಣಿಸಿಕೊಂಡಳು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅನಂತರ ಶ್ರೀದೇವಿಯು ಆ ದೂತಿಯೊಡನೆ ಕೆಲವೊಂದು ಉಪದೇಶದ ಮಾತು ಗಳನ್ನು ರಕ್ಕಸರಿಗೆ ಹೇಳಿಕಳುಹಿಸಿದಳು. ಆದರೆ ಮೂರ್ಖರಿಗೆ ಉಪದೇಶ ಹೇಳಿ ಫಲ ವುಂಟೆ ? ಅವರು ಕೋಪಾವಿಷ್ಟರಾಗಿ ದೇವಿಯ ಬಳಿ ಬಂದು ಯುದ್ಧವನ್ನೇ ಆರಂಭಿಸಿದರು.

ದೇವಿ, ಭದ್ರಕಾಳಿ ಹಾಗೂ ಬ್ರಹ್ಮಾಣಿ, ವಾರಾಹೀ, ಕೌಮಾರೀ ನಾರಸಿಂಹಿ ಮುಂತಾದ ಮಾತೃಗಣಗಳು—ಎಲ್ಲರೂ ಸೇರಿ ರಕ್ಕಸ ಬಲವನ್ನು ಮರ್ದಿಸಿದರು.

ಆಗ ಶುಂಭಾಸುರನ ತಂಗಿಯಾದ 'ಕ್ರೋಧವತೀ' ಎಂಬವಳ ಮಗನಾದ ರಕ್ತ ಬೀಜನೆಂಬ ಅಸುರನು ಮುಂದೆ ಬಂದನು. ಆತನ ಶರೀರದಿಂದ ಎಷ್ಟು ರಕ್ತಬಿಂದುಗಳು ನೆಲಕ್ಕೆ ಬೀಳುವವೋ, ಅಷ್ಟೇ ರಕ್ಕಸರು ಪುನಃ ಸೃಷ್ಟಿಯಾಗುವರು. ಆತನು ಯುದ್ಧಕ್ಕೆ ತೊಡಗಿದೊಡನೆಯೇ ರಕ್ಕಸರ ಪುನರುತ್ಪತ್ತಿಯಾಗಿ, ಭೂಮಿಯೆತ್ತಲೂ ರಕ್ಕಸರೇ ತುಂಬಿ ಹೋದರು. ಆದರೆ ಚಂಡಿಕಾಶಕ್ತಿಯ ಮುಂದೆ ಅವರೆಲ್ಲ ಮಡಿದರು.

ಅಧ್ಯಾಯ ಒಂಬತ್ತು

(ಈ ಅಧ್ಯಾಯದ ಒಂದೆರಡು ವಾಲೆಗಳನ್ನು ಹೊರತು, ಉಳಿದೆಲ್ಲವೂ ನಷ್ಟ ವಾಗಿವೆ.)

ಅಧ್ಯಾಯ ಹತ್ತು

(ಈ ಅಧ್ಯಾಯದ ಆರಂಭದ ಭಾಗ ಸ್ವಲ್ಪ ನಷ್ಟವಾಗಿದೆ.)

ಬ್ರಾಹ್ಮೀ ಮೊದಲಾದ ದೇವತೆಗಳು ಒಟ್ಟಾಗಿ ಕೂಟಯುದ್ಧಕ್ಕೆ ಆರಂಭಿಸಿದಾಗ ಏಕಾಂಗಿಯಾದ ಶುಂಭಾಸುರನು ಆಕ್ಷೇಪಿಸುವನು. ಆಗ ದೇವಿಯು "ಬ್ರಾಹ್ಮೀ ಮುದೆಲಾಸ್ಡ್ನಕುಳು ಯೆನ ವಿಭೂತಿಕುಳು, ಯೆನಟ್ಪ್ಪ ಐಕ್ಯಾಪ್ಪಯೆಂಡಿ ಶೂಲ" ಎಂದು ಹೇಳಿದೊಡನೆಯೆ, ಅವರೆಲ್ಲರೂ ಮಾಯಕವಾಗಿ, ದೇವಿಯೊಬ್ಬಳೇ ಕಾಣಿಸಿ ಕೊಳ್ಳುವಳು ಮತ್ತು "ಈಗ ನನ್ನಲ್ಲಿ ಯುದ್ಧಮಾಡು" ಎಂದು ಆಜ್ಞಾಪಿಸುವಳು.

ಅನಂತರ ದೇವಿಗೂ ಶುಂಭಾಸುರನಿಗೂ ಭೀಕರವಾದ ಯುದ್ಧವು ಜರಗುವುದು. ಶುಂಭಾಸುರನು ಮುದ್ಗರವೆಂಬ ಆಯುಧವನ್ನು ಪ್ರಯೋಗಿಸುವನು. ದೇವಿಯು ಬಾಣಗಳಿಂದಲೇ ಅದನ್ನು ಖಂಡಿಸುವಳು. ಆತ ಮುಷ್ಟಿಹಿಡಿದು ದೇವಿಯನ್ನು ಹೊಡೆಯಲೆಂದು ಸಮೀಪಿಸಿದನು. ಆಕೆಯೂ ಮುಷ್ಟಿಹಿಡಿದು ಆತನಿಗೆ ಹೊಡೆದಳು. ಕೂಡಲೇ ಆತ ಆಕೆಯನ್ನೆತ್ತಿಕೊಂಡು ಆಕಾಶಕ್ಕೆ ನೆಗೆದನು. ಮತ್ತೆ ಸ್ವಲ್ಪ ಹೊತ್ತು ಆಕಾಶದಲ್ಲೇ ಯುದ್ಧ ನಡೆಯಿತು. ಕೊನೆಗೆ ದೇವಿಯು ಆತನನ್ನು ಹೊಡೆದು ಭೂಮಿಗೆ ಉರುಳಿಸಿದಳು. ತನ್ನ ಶೂಲದಿಂದ ಆತನ ಎದೆಯನ್ನು ಸೀಳಿ ವಧಿಸಿದಳು. ಜಗತ್ತಿಗೆ ನೆಮ್ಮದಿಯಾಯಿತು. ಆಕಾಶ ನಿರ್ಮಲವಾಯಿತು. ಎತ್ತಲೂ ತಂಪುಗಾಳಿ ಬೀಸಿತು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅಧ್ಯಾಯ ಹನ್ನೊಂದು

ಶುಂಭಾಸುರರ ಮರಣದಿಂದ ತೃಪ್ತರಾದ ದೇವತೆಗಳು ದೇವಿಯನ್ನು ಸ್ತುತಿಸಿದರು—'ಎಲೆ ಶೋಭೀಷ್ಟ್ವಿ ದುರ್ಗಾದೇವಿಯೆ, ಪ್ರಸನ್ನೆತಿಯಾಲೆ, ವಿಶ್ವಪ್ರಪಂಚೊಮಿನಿ ರಕ್ಷಿಪುಲೆ' ಎಂದು ಪ್ರಾರ್ಥಿಸಿದರು. "ಧರ್ಮೊಂಕ್‌ಳೆ ಉದ್ಧರೀಪ್ಪುಣಚಿತ್ತಿ ಸ್ವರೂಪಂತಾದ ಅವತಾರೊ ಬೆನ್‌ಪ್ಪಾರ್ ಈರಾವಂತೆ ಬೇತದ್ದಿ" ಎಂದು ಬಿನ್ನವಿಸಿದರು.

ದೇವಿಯು "ಜಾಸ್ತ್ದವರೊ ಬೋಡೊಂದಿಂಚ ಈಕ್‌ಳೆಮನಸ್ಸ್‌ಟ್‌ಂಡ್ ? ಅಂಚಿತ್ತಿ ವರೊಮಿನಿ ವರಿತೋಣ್‌ಲೆ" ಎಂದು ಅಪ್ಪಣೆಯಿತ್ತಳು. ಆಗ ದೇವತೆಗಳು "ಎಂಕ್‌ಳೆಕ್ ಶತ್ರುಕುಳೆ ನಾಶಾಕೋಸ್ದ್ತ್ತ್, ಸಮಸ್ತಬಾಧೆಕ್‌ಳೆನಿ ಚೆಟ್ಟೋಲೆ" ಎಂದು ಬಿನ್ನವಿಸಿದರು.

ಅನಂತರ ದೇವಿಯು ತನ್ನ ಮುಂದಿನ ಅವತಾರಗಳ ಕುರಿತು ತಿಳಿಸುವಳು. ತಾನು ಮುಂದೆ 'ರಕ್ತದಂತಿಕೆ, ಶತಾಕ್ಷಿ, ಶಾಕಂಭರಿ, ದುರ್ಗಾದೇವಿ, ಭೀಮಾದೇವಿ, ಭ್ರಾಮರಿ—ಮುಂತಾದ ಹೆಸರುಗಳಿಂದ ಕರೆಯಲ್ಪಡುವೆನೆಂದೂ ತಿಳಿಸುವಳು.

ಅಧ್ಯಾಯ ಹನ್ನೆರಡು

ಪರಮೇಶ್ವರಿಯು ದೇವತೆಗಳೊಡನೆ—"ಈ ಸ್ತೋತ್ರೊಂತಾವ ಜಾವೊರಿ ಭಕ್ತಿಯಾಸ್ದ್‌ನಾಯೆ ಏಕಾಗ್ರಮನಸ್ಸ್‌ತ್ತಾವ ನಿತ್ಯೊಲಾ ಯೆನನಿ ಸ್ತುತೀಪ್ಪೆಂದ್ ಆ್‌ತ್ನಾವುಟ್ಯ, ಅಂಚಿತ್ನಾಯೆಕ್ ಸಮಸ್ತಬಾಧೆಕ್‌ಳೆನಿ ನಾಶಾಕೋವರ್ತ್ತೆನ್" ಎಂದು ಆಜ್ಞಾಪಿಸುವಳು. ಸಮಸ್ತ ದೇವೀಮಹಾತ್ಮೆಯ ಫಲಶ್ರುತಿಗಳು ಏನೇನು ಎಂದೆಲ್ಲ ವಿವರಿಸುವಳು. ಅನಂತರ ಅದೃಶ್ಯಳಾಗುವಳು.

ಇಲ್ಲಿ ದೇವೀಮಹಾತ್ಮೆಯ ಕಥೆ ಮುಗಿಯುತ್ತದೆ. ಈ ಕಥೆಯನ್ನು ಸುರಥ ಸಮಾಧಿಗಳಿಗೆ ವಿವರಿಸಿದ ಸುಮೇಧ ಋಷಿಯು "ಇಂಥ ವಿಶ್ವಮಾತೆಯು ಸಂತೋಷಿಸಿದಳೆಂದಾದರೆ ಆಕೆ ನಮಗೆ ಸುಜ್ಞಾನವನ್ನೂ ಮೋಕ್ಷವನ್ನೂ ನೀಡುವಳು. ಬಡತನವನ್ನು ಕಳೆದು ಸಂಪತ್ತನ್ನು ನೀಡುವಳು. ಪತ್ನೀಪುತ್ರಸೌಭಾಗ್ಯವನ್ನೂ ಕರುಣಿಸುವಳು" ಎನ್ನುವನು.

ಅಧ್ಯಾಯ ಹದಿಮೂರು

ದೇವೀಮಹಾತ್ಮೆಯ ಮೊದಲ ಅಧ್ಯಾಯದ ಕತೆ ಇಲ್ಲಿ ಉಪಸಂಹಾರಗೊಳ್ಳುತ್ತದೆ, ಸುಮೇಧಾಋಷಿ ಹೇಳುತ್ತಾನೆ—"ನಾನು ಮೊದಲು ಹೇಳಿದ 'ವಿಷ್ಣುಮಾಯೆ' ಎಂಬವಳು ಈ ದೇವಿಯೇ ಆಗಿದ್ದಾಳೆ. ಈ ದೇವಿಯ ಕಾರಣದಿಂದಾಗಿಯೇ ನೀನು ಮತ್ತು ಸಮಾಧಿ ಹಾಗೂ ಇತರರೂ ಕೂಡ ಮೋಹಕ್ಕೆ ಒಳಗಾಗಿದ್ದೀರಿ. ಆದ್ದರಿಂದ ನೀವು ಆಕೆಯನ್ನೇ ಶರಣು ಹೊಂದಿರಿ" ಎನ್ನುವನು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸುರಥನು ಆ ಮುನೀಶ್ವರನಿಗೆ ವಂದಿಸಿ, ಸಮಾಧಿಯೆಂಬ ವೈಶ್ಯನ ಜೊತೆಯಲ್ಲಿ ನೇರವಾಗಿ ಸಹ್ಯ ಪರ್ವತಕ್ಕೆ ಹೋಗಿ, ಅಲ್ಲಿ ತುಂಗಭದ್ರಾನದೀತೀರದ 'ಕಂದುರು' ಪ್ರದೇಶದಲ್ಲಿ ತಪವನ್ನಾಚರಿಸಿದರು. ಮಣ್ಣಿನಿಂದ ದೇವಿಯು ಮೂರ್ತಿಯನ್ನು ನಿರ್ಮಿಸಿ ಆರಾಧಿಸಿದರು. ಮೂರು ವರ್ಷಗಳ ಬಳಿಕ ದೇವಿಯು ಪ್ರತ್ಯಕ್ಷಳಾದಳು. "ಯೆನ್ನತ್ತ್ ಜಾಸ್ದ್ ವರೊ ಬೋಲ್ಟ್ರ್ನ್ ?" ಎಂದು ಕೇಳಿದಳು. ಸುರಥಮಹಾರಾಜನು ತಾನು ಶತ್ರುಗಳನ್ನು ಗೆದ್ದು ಮರಳಿ ತನ್ನ ರಾಜ್ಯವನ್ನು ಪಡೆಯಬೇಕೆಂದೂ ಮುಂದಿನ ಜನ್ಮದಲ್ಲಿ ಮನ್ವಂತರದ ಅಧಿಕಾರವನ್ನು ಪಡೆಯುವಂತಾಗಬೇಕೆಂದೂ ಬೇಡಿಕೊಂಡನು. ಸಮಾಧಿಯು ತನ್ನ ಮೋಹವು ದೂರವಾಗಿ ತಾನು ಸುಜ್ಞಾನಿಯಾಗುವಂತಹ ವರ ನೀಡಬೇಕೆಂದೂ ಕೇಳಿಕೊಳ್ಳುವನು. ಅವರಿಬ್ಬರಿಗೂ ಬೇಡಿದ ವರಗಳನ್ನಿತ್ತು ದೇವಿಯು ಅಲ್ಲೇ ಅಂತರ್ಧಾನವಾಗುವಳು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ತುಳು ದೇವೀಮಹಾತ್ಮೆ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

"FORWARDED FREE OF COST, AND WITH THE COMPLEMENTS OF THE DEPARTMENT OF EDUCATION, GOVERNMENT ... DELHI"

ತುಳು ದೇವೀಮಹಾತ್ಮ್ಯ

೧

ಇಂಚ ಜಾವೊರಿ[1] ಕೌಷ್ಟಿಕೆ[2] ನ್ಪಿ ಬ್ರಾಹ್ಮಣೋತ್ತಮೆಂ ಮಾರ್ಕಂಡೇಯೆರೆಟ ವಿಜ್ಞಾಪನೊವೊಂನಿ ಬೆನ್ಪ್ಪೆರ್ ।

ಯೆಲಿ ಯೆಡ್ಡ[3] ಪ್ರತೊಳ್ಳಂಚಿತ್ತೀ ಮಾರ್ಕಂಡೇಯೆರೆ, ಪೂರ್ವೊಂಟ್ ಏಟ್ವೆರ್[4] ಮಂನಂಕಂಳೆ ಪ್ರಸಂಗೊವೊಂನಿ ಉರಾಜ್ಞಾಪಿತರ್ । ಯೆಣ್ಮೆಂನತ ಮಂನಂ ಆಕ್ಣಾಯೆಂ ಜಾವೊರಿ ಸಾವರ್ಣಿಂದಿಂಚ ಪುದರ್ಳ್ಯಾಯೆ ಸ್ದ್ಂಡಾವರ್ತ್ತೀಂದಿಂಚ[5] ಆಜ್ಞಾಪಿತರ್ । ಅಂಚಿತ್ತ್ನಾಯು ಜನ್ಮೊವೊಂನಿ ಯೆಂಕ್ ವಿಸ್ತಾರೊಂತಾವ ಆಜ್ಞಾಪಿಪ್ಪುಲೇಂದಿಂಚ ವಿಜ್ಞಾಪನೊವೊಂನಿ ಬೆಂದೆರ್ । ಕೌಷ್ಟಿಕೆರ್ ವಿಜ್ಞಾಪನೊ ಪೆಂದಿ ವಚನೊ ಕೇಂಡ್ತ್ ಮಾರ್ಕಂಡೇಯೆಂರ್ ಪ್ರತಿವಚನೊ ಆಜ್ಞಾಪೀಪ್ಪೆರ್ ।

ಸಾವರ್ಣೀ ನ್ಪಿ ಮಂನಂ ಸೂರ್ಯದೇವೆರೆ ಮಂಗೆ ಆಸ್ದ್ನಾಯೆಂ[6] ಎಣ್ಮೆಂನತ ಮಂನೂಂದಿಂಚ । ಅಂಚಿನಾಯಂ ಉತ್ಪತ್ತಿನಿ ವಿಸ್ತಾರೊಂತಾವ ಅನುವರ್ಣೀಪ್ಪೆನ್[7] । ಯೆಂನಸವಿಶಾಪೊಂಟ್ತ್ ಕೇಣ್ಲೆ ।

ಎಲೆ ಭಾಗ್ಯೊಮಂಳ್ಳಂಚಿತ್ತಿ ಕೌಷ್ಟಿಕೆರೆ, ಆಯೆಂ [ಎಂ]ಚ ಮಂನ್ವಂತರಾಧಿಪತ್ಯೊ ವೊಂನಿ ಲಾಭಿತೆನ್ನಾಪುಕ[8] । ಮಂಹಾಮಶಾಯೆಂಕ್ಳ್ಳಂಚಿತ್ತೀ ಸಾಮಂರ್ಥ್ಯೊಂತವ ಸೂರ್ಯ ದೇವೆರೆ ಮಂಗೆ ಆಸ್ದ್ತ್[9] ಸಾವರ್ಣಿ ನ್ಪಿ ಮಂನಂ ಆಸ್ದ್ತ್ ಜನಿತೆ ।

ಪೂರ್ವೊಂಟ್ ಸ್ವಾರೋಚಿಷ ಮಂನ್ವಂತರೊಂಟ್ಪ್ಪ ಚೈತ್ರೆನ್ಪಿ ಅರಸಂ ವೈಂಶೊಂಟ್ಪ್ಪ ಸಂರಥೇಂದಿಂಚ ಪುದರ್ಳ್ಯಾಯೆಂ ಸಮಂಸ್ತಭೂಮಂಡಲೊಂಕ್ ಅರಸಂ ಆಸ್ದ್ ಭವಿತೇಂದಿಂಚ[10] ಮಾರ್ಕಂಡೇಯೆಂರ್ ಕೌಷ್ಟಿಕೆರೆಕಾವ ಆಜ್ಞಾಪಿತೆರ್ ।

ಮಾರ್ಕಂಡೇಯೆಂರ್ ಕೌಷ್ಟಿಕೇಯೆಂರೆಟಾಜ್ಞಾಪೀಪ್ಪೆರ್ ।

ಅಂಚಿತ್ತೀ ಸಂರಥಚಕ್ರೇಶ್ವರೆ ಎಡ್ಡೆಂದೊ[11] ಪ್ರಜೆಕುಳೆನಿ, ಉರಸ್ಥಲೊಂಟ್ತ್ ಉಂಡಾನಂಚಿತ್ತಿ[12] ಪುತ್ರೇರ್ಕುಳೆನಿ ಪಿತಾವು[13] ಯೆಂಚರಕ್ಷಿಪ್ಪುಕ್ಣ ಆ ಪ್ರಕಾರೊಮೀ

---

1. ಜಾವೊರಿ–ಯಾವನೊಬ್ಬ 2. ಕೌಷ್ಟಿಕೆ–ಕೌಶಿಕ (?) 3. ಯೆಡ್ಡ–ಉತ್ತಮ 4. ಏಟ್ವೆರ್–ಏಳು ಮಂದಿ 5. ಸ್ದ್ಂಡಾವರ್ತ್ತೆ–ಹುಟ್ಟಲಿರುವನು. 6. ಆಸ್ದ್ನಾಯೆ–ಆದವನು 7. ಅನುವರ್ಣೀಪ್ಪೆನ್–ವರ್ಣಿಸುವೆನು 8. ಲಾಭಿತೆ–ಪಡೆದನು, ಎನ್ನಾ ಪುಕ–ಎಂದರೆ 9. ಆಸ್ದ್ತ್–ಆಗಿ 10. ಭವಿತೆ–ಸಂಭವಿಸಿದನು 11. ಎಡ್ಡೆಂದೊ–ಚೆನ್ನಾಗಿ 12. ಉಂಡಾನಂಚಿತ್ತಿ–ಉಂಟಾದ 13. ಪಿತಾವು–ತಂದೆ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ರಕ್ಷೀಪ್ಪಿ ಸಮಯೊಂಟ್, ಕೋಲಾವಿಧ್ವಂಸಿಕುಳೊನ್‌ಪ್ಪಿ ದುರ್ಬಲೇರ್ಕುಳು, ಭೂಪಾಲ ಕೇರ್ಕುಳೆಕ್ ಶತ್ರುಕುಳಾಸ್ದ್ ಭವಿತೆರ್ । ಅಂಚಿತ್ತೀ ಸುರಥ ಚಕ್ರೇಶ್ವರಕ ಆ ಕೋಲಾ ವಿಧ್ವಂಸಿಕುಳೆಕ ಯುದ್ಧೋಂ[ಡಾ]ಸ್ದ್‌ನ್[1]। ಅತ್ಯಂತೊ ಬಲೋಳ್ಳಂಚಿತ್ತೀ[2] ಶತ್ರುಕುಳು ಕುಲಹೀನಕೇರ್ಕುಳು. ಅಂಚಿನಾಕುಳೆತ್ತಾವ ಯುದ್ಧೊಂತೌಳ್ ಪರಾಜಯೊ ಪ್ರಾಪಿತೆ[3] ।

ಯೆಂಲೆ ಕೌಷ್ಟಿಕೆರೆ, ಅನಂತರೊಂಟ್ ತನ್‌ಕುಳ್ಳ ಪಟ್ಟಣೊಂಕ್ ಪ್ರಾಪಿತ್‌ನಾಯೆ[4] ನಿಜದೇಶೊಂಕ್ ಅಧಿಪತಿಯಾಸ್ದ್ ನೀತೆರ್ೊಂಡ್‌ತ್ತೆ[5] । ಆ ವೇಳೆಯೊಂಟ್ ಅನೇಕ ಬಲೋಳ್ಳಂಚಿತ್ತೀ ಶತ್ರುಕುಳೆತ್ತಾವ ಔಳಂಪ್ಪಲ ಬಾಧಿ[ಪೊವೊಂ]ಡೆ[6] । ಔಳು ತನ ಪಟ್ಟಣೊಂಟ್ ನೀತ್ರೊಂಡ್‌ಪ್ನಾಪುಕ[7], ತನ ಬುದ್ಧಿವಂತೇರ್ಕುಳು ದುಷ್ಟೇರ್ಕುಳು ನಿಷ್ಠುರೊಮಾಯಿ ಮನಸ್ಸ್‌ಳ್ಳಾಕುಳು ಬಲವಂತೇರ್ಕುಳು ಬಲಹೀನೆ ಆಯಿ ಸುರಥ ಚಕ್ರೇಶ್ವರ ಭಂಡರದ್ರವ್ಯೊಮಿನಿ[8] ಅಪಹರಿತೊಂಡೆರ್ ಅನಂತರೊಂಟ್ ಪೋಸ್ದ್‌ತ್ತಿ ಸ್ವಾಮಿತ್ವಂಳ್ಳಾಯೆ[9] ಬೇಂಟೆಕ್ ಪೋಪ್ಪೆನ್‌ಪ್ಪಿ ವ್ಯಾಜೊಂತಾವ ಒರ್ಯೆ ಕುದ್‌ರೆ ನೇರೊಂಡ್‌ತ್ತ್ ಗಂಭೀರೊಮಾಯಿ ವನೊಮಿನಿ ಪ್ರಾಪಿತೆ । ಆ ಸುರಥ ಚಕ್ರೇಶ್ವರೆ ಔಳ್‌ಪ್ಪ ಬ್ರಾಹ್ಮಣ ಶ್ರೇಷ್ಠೆಯಾಯಿ ಸುಮೇಧಾವುನ್‌ಪ್ಪಿ ಋಷಿ ಆಶ್ರಮೊಮಿರಾಕ್ಷಿತೆ । ಆರೆ ಆಶ್ರಮೊ ಯೆಂಚೆಂಡ್‌ನ್ನಾಪುಕ[10], ಆರೆ ತಪೋಬಲ ಮಹಿಮೆಂತ್ತಾವ, ವೈರೊಳ್ಳ ಮೃಗೊಂಕುಳು ವೈರೊ ಬುಡ್‌ಸ್ದ್ ನೀತೆರ್ೊಂಡ್‌ಳ್ಳೊ । ರ್‌ಷಿಶಿಷ್ಯೇರ್ಕುಳೆತ್ತಾವ ಶೋಭಿಪ್ಪಿ ಆಶ್ರಮೊಮಿನಿ ಶೂಯ್ಯೆ ।

ಆ ಸುರಥಚಕ್ರೇಶ್ವರೆ ಮುನಿಕುಳೆಟ್ ಶ್ರೇಷ್ಠೆಯಾಯಿ ಸುಮೇಧಾವು ಋಷಿ ಆಶ್ರಮೊಂಟ್‌ಪ್ಪ ಆ ಋಷಿಟಾವ ಬಹುಮಾನಾಕೊವೊಂಡ್‌ತ್ತ್ ಔಳ್‌ಮೂಳೆ ಸಂಚರಿ ತೊಂಡ್ ಪಾಕೊ ಕಾಲೊ ನೀತೆರ್ೊಂಡ್‌ತ್ತೆ ।

ಆ ವೇಳೆಯೊಂಟ್ ಅಂಚಿತ್ತಿ ಸುರಥ ಚಕ್ರೇಶ್ವರೆ ಔಳ್‌ಪ್ಪ ಆಲೋಚಿಪ್ಪೆ । ಏನ್ ಎನ್ನಸ್ದ್‌ನ್‌ಪ್ಪಿ[11] ಮೋಹೊಂತಾವ ಕೂಡ್‌ತ್ತೀ ಮನಸ್ಸ್‌ಳ್ಳಾಯೆ । ಯೆನ ಸುಂಬೆ ತಾಕುಳು ಪೂರ್ವೊಂಟ್ ರಕ್ಷಿತ್ನಂಚಿತ್ತೀ ರಾಜ್ಯೊ ಎನಟಾವ[12] ಬುಡ್‌ಪ್ರೋವಪ್ಪಡ್‌ನ್[13]। ಎಂಕ್‌ಳ್ಳ ಭೃತ್ಯೇರ್ಕುಳು ಆಮಂತಿ ಕರ್ಮೊಮಿನಿ[14] ಪ್ರವರ್ತಿಪ್ಪೋಪ್ಪುಣಾಕುಳು[15]। ಅಂಚಿ

---

1. ಉಂಡಾಸ್ದ್‌ನ್-ಉಂಟಾಯಿತು 2. ಉಳ್ಳಂಚಿತ್ತಿ-ಇರುವ 3. ಪ್ರಾಪಿತೆ-ಹೊಂದಿದನು 4. ಪ್ರಾಪಿತ್‌ನಾಯೆ-ಹೊಂದಿದವನು 5. ನೀತೆರ್ೊಂಡ್‌ತ್ತೆ-ವಾಸಿಸಿಕೊಂಡಿದ್ದನು 6. ಬಾಧಿಪೊವೊಂಡೆ-ಬಾಧಿಸಲ್ಪಟ್ಟನು 7. ನೀತ್ರೊಂಡ್‌ಪ್ನಾಪುಕ-ವಾಸಿಸುತ್ತಿರುವಾಗ 8. ಭಂಡರದ್ರವ್ಯೊ-ಭಂಡಾರದ ಹಣ 9. ಪೋಸ್ದ್‌ತ್ತಿ ಸ್ವಾಮಿತ್ವಂಳ್ಳಾಯೆ-ಅಧಿಕಾರ ಕಳಕೊಂಡವನು 10. ಯೆಂಚೆಂಡ್‌ನ್ನಾಪುಕ-ಹೇಗುಂಟೆಂದರೆ 11. ಎನ್ನಸ್ದ್‌ನ್‌ಪ್ಪಿ-ನನ್ನದು ಎಂಬ 12. ಎನಟಾವ-ನನ್ನಿಂದ 13. ಬುಡ್‌ಪೋವಪ್ಪಡ್‌ನ್-ಬಿಡಿಸಲ್ಪಟ್ಟಿತು 14. ಆಮಂತಿಕರ್ಮೊಮಿನಿ-ಮಾಡಬಾರದ ಕರ್ಮವನ್ನು, ನಿಷಿದ್ಧಕರ್ಮವನ್ನು 15. ಪ್ರವರ್ತಿಪೋಪ್ಪುಣಾಕುಳು-ಮಾಡುವವರು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ನಾಕುಳೆತ್ತಾವ ಎಂಕ್ಳೆಂಚಿತ್ತಿ ಭೂಮಿನಿ ಧರ್ಮೊಂತವ ರಕ್ಷೀಪ್ಪೆರೋಸ್ದ್ಯೋ ? ಗಜೊಂಕುಳೆಟ್ ಶ್ರೇಷ್ಠೊ ಯೆಂನ ಆನೆ ಆಕ್ಣಸ್ದ್[1] । ಪರಾಕ್ರಮೊಳ್ಳಸ್ದ್[2] । ಸದಾಕಾಲೊಲಾ ಮದೊಂತಾವ ಕೂಡ್ತ್ನಸ್ದ್[3]। ಯೆಂನ ವೈರಿಕ್ಳೆ ವಶೊಮಿನಿ ಪ್ರಾಪೀತ್ನಸ್ದ್[4]। ಜಾಸ್ದ್[5] ಭೋಗೊಂಕ್ಳೆನಿ ಭೋಗೀಪ್ಣೋ? ನಿತ್ಯೊಲ ಎನ ಪೆರವುತ್ತ್ ಬರ್ಪುಣಾಂಚಿತ್ತೀ ಭೃತ್ಯೇರ್ಕುಳು ಪ್ರಸಾದಧನಭೋಜನೊಂತಾವ ಕರ್ಮೊಮಿನಿ ಬೆನ್ಪ್ಣಾಕುಳು ಇತೆನ್[6] ಮಗ್ಟಿತ್ಯೊರ್ಯ[7] ಪೆರವುತ್ತ್ ಪೋಪ್ಪುಣಾಂಚಿತ್ತೀ ವೃತ್ತಿನಾಕೋಪ್ಪೆರ್[8] ನಿಶ್ಚಯೋಂದಿಂಚ ಆಲೋಚೀಪ್ಪೆ । ಎಂಕ್ಳ ಭಾರ್ಯೆರ್ಯಾಕ್ಣಾಳ್ ಶ್ರೇಷ್ಠೊಮಾವುಳ್ಳ ಪೂರುಂ[9] ಪ್ರದೇಶೊಳ್ಳೆಂಚಿತ್ತಾಳ್ । ಮಂಗೆಲ ಅತ್ಯಂತೊ ಶೋಭಿಪ್ಣಾಯೆಂ । ಯೆಂನ ಆರಮಂನೆಯಾಕ್ಣಸ್ದ್ ಸ್ವರ್ಗೊಂಕ್ ಸರಿಯಾಸ್ದ್ ಶೋಭಿಪ್ಣಸ್ದ್। ದಾಸಿಕುಳು ಅಪ್ಸರಸ್ತ್ರೀಕ್ಳೆಕ್ ಸರಿಯಾಸ್ದ್ನಾಕುಳು ಯೋಪ್ರಕಾರೊಳ್ಳೆರೋ ವ್ಯರ್ಥೊಮಾಪ್ಪ ಶೆಟ್ಯೋಪ್ಪಿ[10] ಶೀಲೊಳ್ಯಾಕ್ಳೆಟಾವ ಏಪ್ರಕಾರೊಳ್ಳೆರೋ[11]? ಯೇಪಟ್ಟ್ರಲ[12] ನಾಶಾಕೋಪ್ಪಿ ಶೀಲೊಳ್ಯಾಕುಳೆಟಾವ ಅತ್ಯಂತೊ ಮುಂಜ್ಯೊಂತಾವಾ[13] ಜಿತ್ತೀ[14] ಭಂಡಾರದ್ರವ್ಯೊ ನಾಶಾಪರತ್ತ್ । ಸ್ದಂಬೆನಿಲ[15] ಒಟ್ತ್ಳವೆನಿಲ[16] ಏಪಟ್ಟ್ರಲ ಆಲೋಚೀಪ್ಪೀ ಸುರಥ ಚಕ್ರೇಶ್ವರೆ ಅವುಳುಪ್ಪ[17] ಸುಮೇಧಾವು ಋಷೀಶ್ವರ ಆಶ್ರಮೊಂತ ಸಮಿಪೊಂಟ್ ಒರಿ ವೈಶ್ಯನಿ ಶುಯ್ಯೇಂದಿಂಚ[18] ಮಾರ್ಕಂಡೇಯೆರ್ ಕೌಷ್ಟುಕೇರೆಟಾಜಲ್ಲಿಪಿತೆರ್ ।

ಮಾರ್ಕಂಡೇಯೆರ್ ಕೌಷ್ಟುಕೇರೆಟಾಜಲ್ಲಿಪಿಪ್ಪೆರ್–ಆ ಸುರಥ ಚಕ್ರೇಶ್ವರೆ ಆ ವೈಶ್ಯಟ ವಿಚಾರಿಪ್ಪೆ । ಯೆಲೆ ಕರ್ತವ[19], ಇಯ್ಯೆ[ಯೇರ್] ಈಡೆಕಾವ[20] ಬರ್ಯೆರ ಜಾಸ್ದ್ ಕಾರಣೊ ? ಇನನಿ ಶೂನಾಪುಕ[21] ದುಃಖೊಂತಾವ ಕೂಡ್ತ್ನಾಯೇಂದಿಂಚ ಶೋಜಿಪ್ಪುಣ್[22] । ದುಃಖೊ ಬರ್ಯೆರ ಜಾಸ್ದ್[23] ಕಾರಣೊ ? ಪಣ್ಲಾಂದಿಂಚ ವಿಚಾರಿತೆ। ಈ ಪ್ರಕಾರೊ ಸುರಥಚಕ್ರೇಶ್ವರೆ ವಿಚಾರಿತಿ ವಚನೊಮಿನಿ ಕೇಂಡ್ತ್ತ್ ವೈಶ್ಯೆ ಆಕ್ಣಾಯೆಂ ವಿನಯೋಂತಾವ ಬಾಗೊಂಡ್[24] ನಮಸ್ಕರಿತ್ ಸುರಥಚಕ್ರೇಶ್ವರಟ ಪ್ರತಿ

---

1. ಆಕ್ಣಸ್ದ್–ಆದುದು 2. ಉಳ್ಳಸ್ದ್–ಇರುವಂಥಾದ್ದು 3. ಕೂಡ್ತ್ನಸ್ದ್–ಕೂಡಿರುವಂಥಾದ್ದು 4. ಪ್ರಾಪೀತ್ನಸ್ದ್–ಹೊಂದಿರುವಂಥಾದ್ದು 5. ಜಾಸ್ದ್–ಯಾವ 6. ಇತೆನ್–ಈಗ 7. ಮಗ್ಟಿತ್ಯೊರ್ಯ–ಇನ್ನೊಬ್ಬನ 8. ಆಕೋಪ್ಪೆರ್–ಮಾಡುತ್ತಿರುವರು 9. ಪೂರು–ತೊಡೆ 10. ಶೆಟ್ಯೋಪ್ಪಿ–ಹಾಳುಮಾಡುವ 11. ಏಪ್ರಕಾರೊ–ಯಾವರೀತಿ 12. ಯೇಪಟ್ಟ್ರಲ–ಯಾವಾಗಲೂ 13. ಮುಂಜ್ಯೊಂತಾವಾ–ಜಾಗ್ರತೆಯಿಂದ 14. ಜಿತ್ತೀ–ಇಟ್ಟಿರುವ 15. ಸ್ದಂಬೆನಿಲ–ಇದನ್ನೂ 16. ಒಟ್ತ್ಳವೆನಿಲ–ಬೇರೆಯದನ್ನೂ 17. ಅವುಳುಪ್ಪ–ಅಲ್ಲಿ 18. ಶುಯ್ಯೆ–ನೋಡಿದನು 19. ಕರ್ತವ–ಒಡೆಯ 20. ಈಡೆಕಾವ–ಇಲ್ಲಿಗೆ 21. ಶೂನಾಪುಕ–ನೋಡುವಾಗ 22. ಶೋಜಿಪ್ಪುಣ್–ತೋರುತ್ತದೆ 23. ಜಾಸ್ದ್–ಏನು 24. ಬಾಗೊಂಡ್–ಬಗ್ಗಿಕೊಂಡು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವಚನೊ ವಿಜ್ಞಾಪನೊ ಬೆಂದೆ ।

ಯೇನಾರ್ಕ್ಣಾಯೆಂ ಸಮಾಧೀಂದಿಂಚ ಪ್ರುದರ್ಳ್ಯಾಯೆಂ । ಧನೋಳ್ಳಂಚಿತ್ರೀ ವೈಶ್ಯೇಕರ್ಳೆ ಕಂಲೊಂಟ್ಂಡಾಸ್ದ್ನಾಯೆ । ಧನಲೋಭೊಂಟ್ತ್ ಅಸಾಧುಂಕಂಳಾಸ್ದ್ಳ್ಯಂಚಿತ್ರೀ ಪೊಣಿಜೇವು[1] ಬಾಲೆಕ್ಳೆಟಾವ ನಿರಾಕರಿಪ್ಪೊವೊಂಡೆ । ಯೆಂಕ್ಳ್ಯಂಚಿತ್ರೀ ಧನೊಮಾರ್ಕ್ಣಸ್ದ್ ಯೆಂನ ಕಂಟುಂಮೊಂತಾಕಂಳಂ[2], ಯೆಂನ ಪೊಣಿಜೇವು ಬಾಲೆಕಂಳೆಟಾವ ಗೃಹಿಪ್ಪೊಪ್ಪಡ್ನ್[3] । ಅಸ್ದ್ ಕಾರಣೊಂತಾವನ[4] ಆತ್ಮಬಂಧುಂಕಂಳೆತ್ತಾವನ ನಿರಾಕರಿಪ್ಪೊವೊಂಡ್ತ್, ದುಃಖೀಪ್ಪುಣಾಯೆಂ ಆವೊಂಡ್ತ್ ವನೊಂಕಾವ ಬಟ್ಟಿನ್[5] । ಯೆಂನ ಪುತ್ರೇಕರ್ಳೆ ನಡವಳಾ[6] ಪಿನ್ಪ್ಣದ್ದಿ । ಕಂಶಲೊಂತಾವ ಕೂಡೊಂಡ್ತ್ಳ್ಳೈರೋ ಅಕಂಶಲೊಂತಾ [ವ] ಉಳ್ಳೈರೋಂಡೇನ್ ಪಿನ್ಪ್ಣದ್ದಿ । ಅವುಳಂಳ್ಳ ಬಂಧುಂಕಂಳಂ, ಸ್ತ್ರೀಕಂಳಂ ಪಂಂದೆಲಾಸಂಚಿತ್ನಾಕಂಳಂ ಕ್ಷೇಪೊಂತಾವುಳ್ಳೈರೋ? ಎನ ಮಂಗಡಿಕಂಳಂಲ[7] ಯೆಡ್ಡ ಬಂದ್ಧಿತ್ತಾ ಉಳ್ಳೈರೋ, ಅಪ್ರಬಂದ್ದೆರಾಸ್ದ್ತ್ರ್ತ್ಳ್ಳೈರೋಂದ್ ಪಿನ್ಪ್ಣದ್ದಿಂದಿಂಚ ವಿಜ್ಞಾಪನೊ ಬೆಂದೆ । ಆ ವೈಶ್ಯವಚನೊ ಕೇಂಡ್ತ್ ಸಂರಥಚಕ್ರೇಶ್ವರೆ ಪ್ರತಿವಚನೊವರಾಜ್ಞಾಪೀಪ್ಪೆ । ಲುಬ್ಧೇಕರ್ಳಾ ಉಳ್ಳಂಚಿತ್ರಿ[8] ಪುತ್ರದಾರಾದಿಕಂಳೆಟ್ಪ್ಪ ಜಾಯೆಂಕ್ ಬೋಡಾಸ್ದ್ತ್[9] ಸ್ನೇಹಾಕೋಪ್ಪಾಂದಂಚ ಸಂರಥಚಕ್ರೇಶ್ವರೆ ಪಂಡಿವಚನೊವಿಂನಿ ಕೇಂಡ್ತ್, ಆ ವೈಶ್ಯೆ ಅರ್ಕ್ಣಾಯೆಂ ಪಣ್ಪ್ಪೆ ।

ಯೆಂಲೆ ಅರಸೆ, ಇಯ್ಯಿ[10] ಪಂಡ್ನಸ್ದ್[11] ಯೆಂಥಾಶಾಸ್ತ್ರೊ ಅಾದ್ಂದಿಂಚ ಯೆಂನ ಮಂನಸ್ಸೆಟ್ಲಾವೊಂಡ್ತ್ಂಡ್ । ಅಂಚಂದಾವುಟಲ[12] ಜಾಸ್ದ್ ಪೆನ್ಕೇನ್? ಯೆಂಕ್ ಪುತ್ರದಾರಾದಿಕ್ಳೆಟ್ಪ್ಪ ನಿಷ್ಠುರಾಕೋಪ್ಪಿ ಮಂನಸ್ಸ್ ಪುಟ್ಟ್ಪಣದ್ದಿ । ಯೆಂಕ್ಳ್ಳ ಪುತ್ರೇಕರ್ಳಂ ಪಿತಾವೆನ್ಪ್ಪಿ ಸ್ನೇಹೊ ಬುಡ್ [ಯ್ಯ] ರ್ । ಧನಲಂಬ್ಧೇಕರ್ಳೆಟಾವ ನಿರಾಕರಿಪ್ಪೋವೊಂಡೆನ್ । ಭರ್ತಾವೆನ್ಪ್ಪಿ ಸ್ನೇಹೊ ಸ್ತ್ರೀಕಂಳೆಕ್ದ್ಯಾಸ್ದ್ನ್ । ಬಂಧುಂವೆನ್ಪ್ಪಿ ಸ್ನೇಹೊ ಬಂಧುಂಕಂಳೆಕ್ದ್ಯಾಸ್ದ್ನ್[13] । ಅಂಚಾವುಟಲಾ ಯೆಂನ ಮನಸ್ಸಾರ್ಕ್ಣಸ್ದ್ ಅರ್ಕ್ಳೆಟ್ಪ್ಪನೇ ಸ್ನೇಹೀಪ್ಪುಣ । ಯೆಂಲೆ ಮಂಹಾಬಂದ್ಧಿಳ್ಳಂಚಿತ್ರೀ ಕರ್ತವ[14], ಇಂಚಿತ್ರೀ ವಿಷಯೊಂಟ್ಪ್ಪಯೆಂಕ್ಳ್ಳಂಚಿತ್ರೀ ಮಂನಸ್ಸಾರ್ಕ್ಣಸ್ದ್, ನಿರ್ಗುಣೇಕರ್ಳಾಸ್ದ್ಳ್ಳಂಚಿತ್ರೀ ಬಂಧುಂಕಂಳೆಟ್ಪ್ಪ ಯೆಂಕ್ಳ್ಳಂಚಿತ್ರೀ ಮನಸ್ಸಾರ್ಕ್ಣಸ್ದ್

---

1. ಪೊಣಿಜೇವು–ಹೆಂಡತಿ 2. ಕುಟುಮೊಂತಾಕುಳು–ಕುಟುಂಬದವರು 3. ಗೃಹಿಪ್ಪೊಪ್ಪಡ್ನ್–ಅಪಹರಿಸಲ್ಪಟ್ಟಿತು 4. ಅಸ್ದ್ ಕಾರಣೊಂತಾವನ–ಆ ಕಾರಣದಿಂದಲೂ 5. ಬಟ್ಟಿನ್–ಬಂದೆನು 6. ನಡವಳಾ–ನಡವಳಿಕೆ, ಯೋಗಕ್ಷೇಮ 7. ಮಗಡಿಕುಳು–ಪುತ್ರರು, ಮಕ್ಕಳು 8. ಲುಬ್ಧೇಕರ್ಳಾ ಉಳ್ಳಂಚಿತ್ರಿ–ಲೋಭಿಗಳಾಗಿರುವ 9. ಬೋಡಾಸ್ದ್ತ್–ಬೇಕಾಗಿ 10. ಇಯ್ಯಿ–ನೀನು 11. ಪಂಡ್ನಸ್ದ್–ಹೇಳಿದ್ದು 12. ಅಂಚಂದಾವುಟಲ–ಹಾಗಾದರೂ 13. ಅ್ದ್ಯಾಸ್ದ್ನ್–ಇಲ್ಲದಾಗಿದೆ 14. ಕರ್ತವ–ಒಡೆಯ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸ್ನೇಹೀಪ್ಪ್ಣ । "ಆಕ್ಳೆಕ್ ಬೋಡಾಸ್ದ್ತ್ತ್ ಆಕ್ಳೆನೆ ನಿನೆತ್ ನಿನೆತ್ ದೀರ್ಘಶ್ವಾ ಸೋಂ[ಕಂ]ಳಂಡಾಪ್ಪೊ। ಯೆಂನ ಮಂನಸ್ಸಾಕ್ಣಸ್ದ್ ದುಃಖೀಪ್ಪ್ಣ । ನಿಷ್ಠುರಾಕೋಪ್ಪಿ ಬಂಧುಂಕೞುಂ ಆವ್ನಟಿಲ ಆಕ್ಳೆಟ್ಪ್ಪ ಯೆಂನ ಮಂನಸ್ಸಾಕ್ಣಸ್ದ್ ನಿಷ್ಠುರೊ ಆಕೋಪ್ಣದ್ದೀಂದಿಂಚ[1] ಸಮಾಧೀನ್ಪ್ಣಂಚಿತ್ತಿ ವೈಶ್ಯೆ ಆಕ್ಣಾಯೆಂ ಸುರಥಚಕ್ರೇಶ್ವರಟ ವಿಜ್ಞಾಪನೊ ಬೇಂಡೇಂದಿಂಚ ಮಾರ್ಕಂಡೇಯೆರ್ ಕೌಷ್ಟಿಕೆನ್ಪ್ಪಿ ಬ್ರಾಹ್ಮಣೋತ್ತ ಮಂಟಾಪಾಜ್ಞಾಪಿತೆರ್ ।

ಯೆಂಲೆ ಕೌಷ್ಟಿ [ಕಿ]ರೆ, ಆನಂತರೊಂಟ್ ಸುರಥ ಸಮಾಧಿಕಂಳುಂ ಒಪ್ಪ[2] ಕೂಡೊಂಡ್ತ್ತ್ ಸುಮೇಧಾವು ರ್ಷೀಶ್ವರ ಸಮಿಶಾಪ್ಪೊಂಕಾವ ಪೋಯೆಂರ್। ನ್ಯಾಯಂ ಮಾರ್ಗೊಂತಾವ ಸುಮೇಧಾವು ಋಂಷೀಶ್ವರನಿ ಪೂಜಿತೆರ್ । ಆ ಋಂಷಿಟಾವ ಬಹುಮಾನಿಪ್ಪೊವೊಂಡೆರ್ । ಆರೆ ಸಮಿಶಾಪ್ಪೊಂಟ್ಪ್ಪ ನೀತ್ತೊಂಡ್ತ್ತ್, ವೈಶ್ಯಪಾರ್ಥಿವೇರ್ಕುಳುಂ ಶಿಲುಶಿಲುಂ[3] ಕಥೆ ಕಂಳೆನಿ ಪ್ರಸಂಗಾಕೊಯೆಂರ್ದಿಂಚ[4] ಮಾರ್ಕಂಡೇಯೇರ್ ಕೌಷ್ಟಿಕೇಯೆಂರೆಟಾಜ್ಞಾಪಿತೆರ್।

ಸುರಥ ಚಕ್ರೇಶ್ವರೆ ಸುಮೇಧಾವು ಋಂಷೀಶ್ವರಟ ವಿಜ್ಞಾಪನೊ ಬೆನ್ಪ್ಪೆ ।

